ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

KARNATAKA STATE OPEN UNIVERSITY
Manasagangothri, Mysore - 570 006

## ಇತಿಹಾಸ
### ಎಂ.ಎ. (ಪ್ರಥಮ)

# HISTORY OF SOUTH INDIA

ಕೋರ್ಸ್ - 1

ಬ್ಲಾಕ್ - 2

ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

**ರಾಷ್ಟ್ರೀಯ ಶಿಕ್ಷಣ ನೀತಿ 1986**

ಮುಕ್ತ ವಿಶ್ವವಿದ್ಯಾನಿಲಯವು ದೂರಶಿಕ್ಷಣ ಪದ್ಧತಿಯಲ್ಲಿ ಬಹುಮಾಧ್ಯಮಗಳನ್ನು ಉಪಯೋಗಿಸುತ್ತದೆ............................ ವಿದ್ಯಾಕಾಂಕ್ಷಿಗಳನ್ನು ಜ್ಞಾನ ಸಂಪಾದನೆಗಾಗಿ ಕಲಿಕಾ ಕೇಂದ್ರಕ್ಕೆ ಕೊಂಡೊಯ್ಯುವ ಬದಲು, ಜ್ಞಾನ ಸಂಪತ್ತನ್ನು ವಿದ್ಯೆ ಕಲಿಯುವವರ ಬಳಿ ಕೊಂಡೊಯ್ಯುವ ವಾಹಕವಾಗಿದೆ.

*The Open University system has been initiated in order to augment opportunities for higher education and as an instrument of democratising education.*

***National Education Policy 1986***

*"The Open University system has been initiated use of Multimedia in distance education system. ..................it is vehicle which transports knowledge to the place of learners rather than transport to the place of learning.*

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ

ಕೋರ್ಸ್ - 1

ಬ್ಲಾಕ್

2

# ದಕ್ಷಿಣ ಭಾರತದ ಪ್ರಾಚೀನ ಮನೆತನಗಳು

ಘಟಕ - 5 — 1
ಮೌರ್ಯರು ಮತ್ತು ಶಾತವಾಹನರು

ಘಟಕ - 6 — 15
ಕದಂಬರು : ರಾಜಕೀಯ ಇತಿಹಾಸ ಮತ್ತು ಸಂಸ್ಕೃತಿ

ಘಟಕ - 7 — 25
ತಮಿಳು ಸಂಗಮ್ ಯುಗ

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಕೆ.ಎಸ್. ರಂಗಪ್ಪ**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

*ವಿಷಯ ಸಂಯೋಜಕರು*

**ಡಾ. ರವಿ ಕೋರಿ ಶೆಟ್ಟರ್**
ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ - 580 003.

*ಸಂಪಾದಕರು*

## ಪಠ್ಯಕ್ರಮ ನಿರೂಪಕರು

1. *ಘಟಕ ಬರೆದವರು*
**ಡಾ. ಮಾದೇಗೌಡ**
ಪ್ರಾಧ್ಯಾಪಕರು,
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

ಘಟಕಗಳು **5** ರಿಂದ **7**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. **2012**

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ ಕುಲಸಚಿವರು (ಆಡಳಿತ)

# ಬ್ಲಾಕ್ - 2

ಬ್ಲಾಕ್ -2 ಮೂರು ಘಟಕಗಳನ್ನು ಹೊಂದಿದೆ. 5 ನೇ ಘಟಕವು "ಮೌರ್ಯರು ಮತ್ತು ಶಾತವಾಹನ" ರ ಇತಿಹಾಸಕ್ಕೆ ಸಂಬಂಧಿಸಿದ್ದು ಅವರ ರಾಜಕೀಯ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ತಿಳಿಸಿಕೊಡುತ್ತದೆ. 6ನೇ ಘಟಕವು ಕದಂಬರ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ನಿರೂಪಿಸುತ್ತದೆ. 7ನೇ ಘಟಕವು ಸಂಗಮ್ ಯುಗಕ್ಕೆ ಸಂಬಂಧಿಸಿದ್ದು ಪ್ರಾಚೀನ ತಮಿಳುನಾಡಿನ ಇತಿಹಾಸವನ್ನು ಕುರಿತು ವಿವರಣೆಯನ್ನು ನೀಡುತ್ತದೆ.

## ಬ್ಲಾಕ್ -II

## ಘಟಕ - 5

# ಮೌರ್ಯರು ಮತ್ತು ಶಾತವಾಹನರು

ವಿಷಯ ಕ್ರಮ


**5.0** ಘಟಕದ ಉದ್ದೇಶ

**5.1** ಪೀಠಿಕೆ

**5.2** ಹಿನ್ನೆಲೆ

**5.3** ಮೌರ್ಯರು ಮತ್ತು ದಕ್ಷಿಣ ಭಾರತ

**5.3.1** ಜೈನ ಪರಂಪರೆ - ಬದ್ರಬಾಹು ಮತ್ತು ಚಂದ್ರಗುಪ್ತ ಮೌರ್ಯ

**5.3.2** ಅಶೋಕ ಚಕ್ರವರ್ತಿ ಮತ್ತು ದಖಿನ್

**5.4** ಶಾತವಾಹನರು- ಹಿನ್ನೆಲೆ

**5.5** ಸಂಕ್ಷಿಪ್ತ ರಾಜಕೀಯ ಇತಿಹಾಸ

**5.6** ಶಾತವಾಹನ ಕಾಲದಲ್ಲಿ ಸಮಾಜ ಮತ್ತು ಸಂಸ್ಕೃತಿ

**5.6.1** ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ

**5.6.2** ಧಾರ್ಮಿಕ ಪರಿಸ್ಥಿತಿ

**5.6.3** ಕಲೆ

**5.7** ಸಾರಾಂಶ

**5.8** ಸ್ವಪರೀಕ್ಷೆ ಪ್ರಶ್ನೆಗಳು

**5.9** ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 5.0 ಘಟಕದ ಉದ್ದೇಶ

ಈ ಘಟಕವು ಎರಡು ಅಧ್ಯಾಯಗಳನ್ನೊಳಗೊಂಡಿದೆ. ಇದರ ಉದ್ದೇಶ ಮೌರ್ಯರ ಮತ್ತು ಶಾತವಾಹನರ ಆಳ್ವಿಕೆ ಮಹತ್ವ ಮತ್ತು ಅವರ ಕೊಡುಗೆಗಳನ್ನು ತಿಳಿದುಕೊಳ್ಳುವುದು. ಈ ಘಟಕವನ್ನು ಅಭ್ಯಾಸಿಸಿದ ಮೇಲೆ ಈ ಕೆಳಗಿನ ವಿಷಯಗಳನ್ನು ನೀವು ಪರಿಚಯಿಸಿಕೊಳ್ಳುವಿರಿ.

* ಮೌರ್ಯ ಆಳ್ವಿಕೆಯ ಸ್ಥಾಪನೆ, ವಿಸ್ತರಣೆ ಮತ್ತು ಪ್ರಭಾವವನ್ನು ತಿಳಿಯುವಿರಿ
* ಜೈನ ಪರಂಪರೆಯ ಸಾಹಿತ್ಯ ಮತ್ತು ಶಾಸನ ಪುರಾವೆಗಳು ಬದ್ರಬಾಹು ಮತ್ತು ಚಂದ್ರಗುಪ್ತ ಮೌರ್ಯರು ದಕ್ಷಿಣಕ್ಕೆ ಆಗಮಿಸಿದ ಬಗೆಗೆ ಮಾಹಿತಿಗಳನ್ನು ಅರಿವಿರಿ.
* ಅಶೋಕ ಚಕ್ರವರ್ತಿ ಶಾಸನಗಳ ಮಹತ್ವವನ್ನು ಗ್ರಹಿಸುವಿರಿ
* ದಕ್ಷಿಣ ಭಾರತದ ಮೇಲೆ ಮೌರ್ಯರ ಆಡಳಿತ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರಭಾವವನ್ನು ಕುರಿತು ಕಲಿವಿರಿ.
* ಮೌರ್ಯರ ನಂತರ ದಖನ್ನಿನಲ್ಲಿ ಶಾತವಾಹನ ರಾಜಕೀಯ ಅಭ್ಯುದಯವನ್ನು ತಿಳಿವಿರಿ.
* ಶಾತವಾಹನ ರಾಜಕೀಯ ಹಿನ್ನೆಲೆ ಮತ್ತು ಅವರ ರಾಜಕೀಯ ಸಾಧನೆಯನ್ನು ಕಲಿವಿರಿ
* ಇವರ ಕಾಲದಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಕಲೆ ಬೆಳವಣಿಗೆಯನ್ನು ಕುರಿತು ವಿಷಯ ಸಂಗ್ರಹಿಸುವಿರಿ

## 5.1 ಪೀಠಿಕೆ

ದಕ್ಷಿಣ ಭಾರತ ಇತಿಹಾಸದಲ್ಲಿ ಲೋಹಯುಗ ಎಂದು ಕೊನೆಗೊಂಡು ಇತಿಹಾಸಯುಗ ಆರಂಭವಾಯಿತ್ತೆಂಬುದನ್ನು ನಿಕರವಾಗಿ ಚಿತ್ರಿಸಲು ಪ್ರಯತ್ನ ನಡೆದಿಲ್ಲ. ಆದರೆ ಮೌರ್ಯ ಆಳ್ವಿಕೆಯ ಕಾಲದಿಂದ ದಕ್ಷಿಣ ಭಾರತದಲ್ಲಿ ಇತಿಹಾಸಯುಗ ಆರಂಭವಾದುದನ್ನು ಸ್ಪಷ್ಟವಾಗಿ ಕಾಣಬಹುದು. ಮೌರ್ಯ ಪೂರ್ವಯುಗದ ಬಗ್ಗೆ ಕಾಲ ಮತ್ತು ಸ್ಥಳಗಳು ಅಸ್ಪಷ್ಟವಾಗಿವೆ. ಮೌರ್ಯ ಆಳ್ವಿಕೆ ಕಾಲದಲ್ಲಿ ದೊರೆತಿರುವ ಶಾಸನ ಮತ್ತು ಸಾಹಿತ್ಯಾಧಾರಗಳು ದಕ್ಷಿಣ ಭಾರತದಲ್ಲಿ ಇತಿಹಾಸಯುಗ ಆರಂಭವಾದುದನ್ನು ದೃಢವಾಗಿ ಸ್ಪಷ್ಟಪಡಿಸುತ್ತವೆ. ದಕ್ಷಿಣ ಭಾರತದ ದಖನ್ ಭೂಪ್ರದೇಶವೂ ಮೌರ್ಯ ಸಾಮ್ರಾಜ್ಯದ ಒಂದು ಭಾಗವಾಗಿದ್ದ ಅದರ ಪ್ರಭಾವಕ್ಕೊಳಗಾಗಿದ್ದಿತೆಂಬ ಸಂಗತಿ ಸ್ಪಷ್ಟವಾಗುತ್ತಾದರೂ ಅನುಮಾನಗಳಿವೆ.

ಮೌರ್ಯರ ತರುವಾಯ ಈ ಭಾಗದಲ್ಲಿ ದಕ್ಷಿಣದವರೇ ಆದ ಶಾತವಾಹನರು ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿ ಸುಮಾರು ನಾಲ್ಕುನೂರು ವರ್ಷಗಳ ಕಾಲ ಆಳಿ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸ್ಮರಣೀಯ ಕಾಣಿಕೆಯನ್ನು ನೀಡಿದ್ದಾರೆ.

## 5.2 ಹಿನ್ನೆಲೆ

ಮೌರ್ಯ ಪೂರ್ವಯುಗದಲ್ಲಿ ದಕ್ಷಿಣ ಭಾರತದ ಪರಿಸ್ಥಿತಿಯನ್ನು ಪರಿಶೀಲಿಸುವುದು ಸೂಕ್ತ. ದಕ್ಷಿಣ ಭಾರತದಲ್ಲಿ ನೂತನ ಶಿಲಾಯುಗವು ಕೊನೆಗೊಂಡು ಐತಿಹಾಸಿಕ ಯುಗ ಯಾವಾಗ ಆರಂಭವಾಯಿತಂಬುದನ್ನು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ನವಶಿಲಾಯುಗ ಕೊನೆಹಂತದ ವೇಳೆಗೆ ಮತ್ತು ಮೌರ್ಯರ ಆಳ್ವಿಕೆ ಸ್ಥಾಪನೆಯಾಗುವ ಪೂರ್ವದಲ್ಲಿ ದಖನ್‌ಮತ್ತು ದಕ್ಷಿಣಭಾರತ ಇತರ ಕಡೆ ಜನಜೀವನ ವ್ಯವಸ್ಥಿತವಾಗಿ ರೂಪುಗೊಂಡಿತ್ತೆಂದು ತಿಳಿದು ಬರುತ್ತದೆ. ಆದರೆ ಮೌರ್ಯಯುಗದ ಪೂರ್ವ ಇತಿಹಾಸದ ರೂಪರೇಖೆಗಳನ್ನು ತಿಳಿಸಲು ಲಿಖಿತ ದಾಖಲೆಗಳು ದೊರೆಯುವುದಿಲ್ಲ. ಆದರೆ ಕೆಲವು ಪ್ರಾಚೀನದ ಗ್ರಂಥಗಳು, ಪುರಾಣಗಳು ಮತ್ತು ಜನಜನಿತವಾಗಿ

ಬಂದಿರುವ ಐತಿಹ್ಯಗಳು ದಖ್ಖಿನ್ ಪ್ರದೇಶ ಕ್ರಿ.ಪೂ. ಶತಮಾನಗಳಿಂದಲೂ ನಾಗರೀಕತೆಯನ್ನು ಹೊಂದಿತ್ತೆಂದು ಸೂಚಿಸುತ್ತವೆ. ರಾಮಾಯಣ ಮತ್ತು ಮಹಾಭಾರತ ಕಾವ್ಯಗಳಲ್ಲಿ ಸೂಚಿತವಾಗಿರುವಂತೆ ಅಗಸ್ತ್ಯ ಮಹರ್ಷಿಯು ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಬಂದನೆಂದೂ ಹಾಗೂ ಋಷ್ಯಶೃಂಗ, ಜಮದಗ್ನಿ ಮೊದಲಾದವರೂ ಕರ್ನಾಟಕ ಪ್ರದೇಶದಲ್ಲಿದ್ದರೆಂದೂ ಹೇಳಲಾಗಿದೆ. ಅಗಸ್ತ್ಯನಿಗೆ ಸಂಬಂಧಿಸಿದ ಉಪಾಸನೆಯು ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲೂ ಆಚರಣೆಯಲ್ಲಿದೆ. ಅಗಸ್ತ್ಯನನ್ನು ತಮಿಳು ಭಾಷೆಯ ಜನಕನೆಂದೂ ಹಾಗೂ ಮೊಟ್ಟಮೊದಲನೇ ತಮಿಳು ಸಂಗಮವು ಅವನಿಂದಲೇ ಸ್ಥಾಪಿತವಾಯಿತೆಂದೂ ಹೇಳಲಾಗಿದೆ. ಕರ್ನಾಟಕದಲ್ಲಿ ವಾತಾಪಿ ಅಥವಾ ಬಾದಾಮಿ ಹಾಗೂ ಮೈಸೂರು ನಗರದ ಸಮೀಪದಲ್ಲಿರುವ ಇಲವಾಲ ಎಂಬ ಸ್ಥಳಗಳು ಅಗಸ್ತ್ಯನಿಗೆ ಸಂಬಂಧಪಟ್ಟ ಐತಿಹಗಳಲ್ಲಿ (ಪುರಾಣ) ಗಳಲ್ಲಿ ಸೇರಿಕೊಂಡಿವೆ.

ರಾಮಾಯಣ ಮತ್ತು ಮಹಾಭಾರತದ ಕಾವ್ಯಗಳಲ್ಲಿ ಕಾಣಬರುವ ವರ್ಣನೆಯಂತೆ ವಾಲಿ, ಸುಗ್ರೀವ, ಹನುಮಾನ್ ಮೊದಲಾದವರು ಬಳ್ಳಾರಿ ಜಿಲ್ಲೆಯ ಕಿಷ್ಕಿಂದೆಯ ಬಳಿಯವರೆಂದೂ ಮತ್ತು ಇಂದಿನ ಹಾನಗಲ್ ಪ್ರದೇಶವು ಮಹಾಭಾರತದ ವಿರಾಟನಗಿರಿಯಾಗಿತ್ತೆಂದೂ, ಹಾಗೂ ಕೊಂಕಣ ಪ್ರದೇಶವು ಪರಶುರಾಮನಿಂದ ಸ್ಥಾಪಿತವಾಯಿತೆಂದೂ ತಿಳಿದುಬರುತ್ತದೆ. ಆದರೆ ಐತಿಹ್ಯಗಳೂ ಹಾಗೂ ಇತ್ತೀಚಿನ ಅಂದರೆ 11ನೇ ಮತ್ತು 12ನೇ ಶತಮಾನದ ಹಲವು ಶಾಸನಗಳಲ್ಲಿ ಉಲ್ಲೇಖಿವಿರುವ ಮೇಲ್ಕಂಡ ವರ್ಣನೆಗಳನ್ನು ನಂಬಲು ಸಾಕಷ್ಟು ಐತಿಹಾಸಿಕ ಆಧಾರಗಳಿಲ್ಲ. ಹಾಗೆಯೇ ಅವುಗಳನ್ನು ಸಂಪೂರ್ಣವಾಗಿ ತಳ್ಳಿಹಾಕಲು ಬರುವುದಿಲ್ಲ. ಪೌರಾಣಿಕ ದಂಡಕಾರಣ್ಯ ಹಾಗೂ ಮಹಿಷ ಮಂಡಲಕ್ಕೆ ಸಂಬಂಧಿಸಿದಂತೆ ವಿದ್ವಾಂಸರು ಬೇರೆ ಬೇರೆ ಪ್ರದೇಶಗಳನ್ನೂ ಹಾಗೂ ಅಭಿಪ್ರಾಯಗಳನ್ನು ನೀಡಿದ್ದಾನೆ. ಪುರಾಣಗಳು ಮತ್ತು ಮಹಾಕಾವ್ಯಗಳು ರಚನೆಯಾದಾಗಿನಿಂದ ಅವುಗಳು ಕಾಲಕಾಲದಲ್ಲಿ ವಿನೂತನವಾಗಿ ರಚಿತವಾಗಿ ವಿಸ್ತಾರವಾಗುತ್ತ ಬಂದಿವೆ. ಆದುದರಿಂದ ಮೇಲ್ಕಂಡ ಐತಿಹ್ಯಗಳು ಯಾವ ಕಾಲದಲ್ಲಿ ಅವುಗಳಲ್ಲಿ ಸೇರ್ಪಡೆಯಾದವೆಂದು ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಈ ನಿರೂಪಣೆ ಮೌರ್ಯ ಪೂರ್ವಕಾಲದ ಸಂಬಂಧಪಟ್ಟಿದ್ದು ಅಸ್ಪಷ್ಟ ಚಿತ್ರಣದಿಂದ ಕೂಡಿದೆ.

## 5.3 ಮೌರ್ಯರು ಮತ್ತು ದಕ್ಷಿಣ ಭಾರತ

ಮೌರ್ಯರ ಕಾಲದಿಂದ ದೊರೆಯುವ ಮೂಲಾಧಾರಗಳಿಂದ ಆವೇಳೆಗೆ ಇಲ್ಲಿ ಜನಜೀವನವು ಸ್ಪಷ್ಟವಾಗಿ ರೂಪುಗೊಂಡಿದ್ದೂ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕವಾಗಿ ಕರ್ನಾಟಕ ಒಳಗೊಂಡಂತೆ ದಖಿನ್ ಪ್ರಸ್ಥಭೂಮಿಯೂ ಭಾರತ ಇತರ ಪ್ರದೇಶಗಳೊಡನೆ ಸಂಪರ್ಕಪಡೆದಿತ್ತೆಂದೂ ತಿಳಿದುಬರುತ್ತದೆ. ಕ್ರಿ.ಪೂ. 6ನೇ ಶತಮಾನದಲ್ಲಿ ಉತ್ತರ ಭಾರತದಲ್ಲಿ ಸ್ಥಾಪಿತವಾದ ಬೌದ್ಧ ಜೈನ ಧರ್ಮಗಳು ಕ್ರಮೇಣ ಭಾರತದಲ್ಲೆಲ್ಲಾ ಪ್ರಚಾರವಾದುದು ಸರಿಯಷ್ಟೆ. ಕ್ರಿ.ಪೂ. 5ನೇ ಶತಮಾನದ ವೇಳೆಗೆ ಈ ಧರ್ಮಗಳು ಕರ್ನಾಟಕ ಒಳಗೊಂಡಂತೆ ದಖ್ಖಿನ್ ಭೂಪ್ರದೇಶದಲ್ಲೂ ಪ್ರಚಾರವಾಗಿರಬೇಕು. ಜೈನ ಮತ್ತು ಬೌದ್ಧ ಸನ್ಯಾಸಿಗಳು ಕರ್ನಾಟಕಕ್ಕೆ ಬಂದು ಹಲವು ಸ್ಥಳಗಳಲ್ಲಿ ನೆಲಸಿರಬೇಕು. ಅನಂತರ ಸಾಮ್ರಾಜ್ಯ ಸ್ಥಾಪಿಸಿದ ನಂದರೂ ಮೌರ್ಯರು ದಖಿನ್ ಭೂಭಾಗದತ್ತ ಸಾಮ್ರಾಜ್ಯ ವಿಸ್ತರಿಸಿರಬೇಕೆಂದು ಐತಿಹಾಸಿಕ ದಿಕ್‌ಸೂಚಿ ತೋರಿಸುತ್ತದೆ. ಒಟ್ಟಿನಲ್ಲಿ ಕ್ರಿ.ಪೂ. 5ನೇ ಶತಮಾನದ ವೇಳೆಗಾಗಲೇ ದಖಿನ್ ಮತ್ತು ದಕ್ಷಿಣ ಭಾರತ ಇತರ ಭಾಗಗಳಲ್ಲಿ ಸುಧಾರಿತ ಜನಜೀವನ, ಹಳ್ಳಿ ಪಟ್ಟಣಗಳೂ, ವ್ಯವಸಾಯ, ಭಾಷೆ ಮತ್ತು ಧರ್ಮ ಮೊದಲಾದಲೆಲ್ಲಾ ಆಚರಣೆಯಲ್ಲಿತ್ತೆಂಬುದರಲ್ಲಿ ಸಂಶಯವಿಲ್ಲ.

ಮೌರ್ಯ ಕಾಲದಿಂದ ದಖಿನ್ ಪ್ರಸ್ಥಭೂಮಿ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳು ದೊರೆಯುತ್ತವೆ. ದಖಿನ್ ಪ್ರಸ್ಥಭೂಮಿಯು (ಕರ್ನಾಟಕವೂ ಸೇರಿಕೊಂಡಂತೆ) ಭಾರತದ ಪ್ರಥಮ ಐತಿಹಾಸಿಕ ಸಾಮ್ರಾಜ್ಯವಾದ ಮೌರ್ಯ ಚಕ್ರಾಧಿಪತ್ಯದ ಭಾಗವಾಗಿತ್ತೆಂಬ ಸಂಗತಿ ಸ್ಪಷ್ಟವಾಗುತ್ತದೆ. ಕ್ರಿ.ಪೂ. 6 ನೇ ಶತಮಾನದಲ್ಲಿ ಮಗದ ರಾಜ್ಯವು ಸ್ಥಾಪನೆಯಾಗಿ ಅಲ್ಲಿ ಅನಂತರ ನಂದ ಸಂತತಿಯ ಆಳ್ವಿಕೆ ಬಂದಿತು. ನಂದರು ಮಗದ ರಾಜ್ಯವನ್ನು

ಎಲ್ಲಾ ದಿಕ್ಕುಗಳಿಗೂ ವಿಸ್ತರಿಸಿ ದೊಡ್ಡ ಸಾಮ್ರಾಜ್ಯ ಸ್ಥಾಪಿಸಿದರು. ದಖಿನ್ ಭೂಪ್ರದೇಶವು ನಂದರ ಆಳ್ವಿಕೆಗೊಳಪಟ್ಟಿತ್ತೆಂಬ ಅಂಶವು ಹಲವು ನಿದರ್ಶನಗಳಿಂದ ತಿಳಿದು ಬರುತ್ತದೆ. ಗೋದಾವರಿ ದಂಡೆಯಲ್ಲಿರುವ ನಂದಗೇಹ ಎಂಬ ಗ್ರಾಮವು ನಂದರ ಆಳ್ವಿಕೆಯನ್ನು ಸೂಚಿಸುತ್ತದೆ ಎಂದು ಹೇಳಲಾಗಿದೆ. ಮಿಗಿಲಾಗಿ 12ನೇ ಶತಮಾನದ ಶಿವಮೊಗ್ಗ ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿರುವ ಒಂದೆರಡು ಶಾಸನಗಳಲ್ಲಿ ನಂದರ ಆಳ್ವಿಕೆಯನ್ನು ಕರಾರುವಕ್ಕಾಗಿ ಉಲ್ಲೇಖಿಸಲಾಗಿದೆ. ಆದುದರಿಂದ ನಂದರು ದಖಿನ್ ಭೂಮಿಯ ಕರ್ನಾಟಕದವರೆಗೂ ರಾಜ್ಯ ವಿಸ್ತರಿಸಿದ್ದರೆಂದೂ ಅನಂತರ ಮೌರ್ಯರ ಆಳ್ವಿಕೆ ಇಲ್ಲಿ ಸ್ಥಾಪಿತವಾಯಿತ್ತೆಂದೂ ಅಭಿಪ್ರಾಯಪಡಲಾಗಿದೆ.

### 5.3.1 *ಜೈನಪರಂಪರೆ- ಬದ್ರಬಾಹು ಮತ್ತು ಚಂದ್ರಗುಪ್ತ ಮೌರ್ಯ*

ಮೌರ್ಯ ಸಂತತಿಯನ್ನು ಕ್ರಿ.ಪೂ.324 ರಲ್ಲಿ ಚಂದ್ರಗುಪ್ತ ಮೌರ್ಯನು ಸ್ಥಾಪಿಸಿ ಆ ವೇಳೆಗೆ ವಿಸ್ತಾರವಾಗಿದ್ದ ಮಗದ ಸಾಮ್ರಾಜ್ಯವನ್ನು ಮತ್ತಷ್ಟು ವಿಸ್ತರಿಸಿದನು. ಆದರೆ ಅವನು ಕೈಗೊಂಡ ದಂಡ ಯಾತ್ರೆಗಳು ದಖಿನ್ ಭೂಭಾಗವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ ಬಗ್ಗೆ ಯಾವ ಆಧಾರಗಳೂ ದೊರೆಯುವುದಿಲ್ಲ. ಸಂಗಂ ತಮಿಳು ಗ್ರಂಥಗಳಿಂದ ಮೌರ್ಯರು ಮಧುರೆ ಮತ್ತು ತಿನ್ನವೇಲಿಯವರೆಗೆ ದಂಡೆತ್ತಿ ಬಂದಿದ್ದುದಾಗಿ ತಿಳಿದು ಬರುತ್ತದೆ. ಮೌರ್ಯ ಚಕ್ರವರ್ತಿಗಳ ಹೆಸರಾಗಲೀ ವಿವರಗಳಾಗಲೀ ದೊರೆಯುವುದಿಲ್ಲ. ಚಂದ್ರಗುಪ್ತಮೌರ್ಯನು ತನ್ನಾಳ್ವಿಕೆಯ ಕೊನೆಗಾಲದಲ್ಲಿ ಸಿಂಹಾಸನ ತ್ಯಾಗಮಾಡಿ ಜೈನ ಮತಾವಲಂಬಿಯಾಗಿ ತನ್ನ ಗುರುವಾದ ಭದ್ರ ಬಾಹುವಿನೊಡನೆ ಕನ್ನಡ ನಾಡಿನ ಪ್ರಸಿದ್ಧ ಜೈನ ಕ್ಷೇತ್ರವಾದ ಶ್ರವಣಬೆಳಗೊಳಕ್ಕೆ ಬಂದು ತಪಸ್ಸನ್ನಾಚಾರಿಸಿ ಕೊನೆಗೆ ಸಲ್ಲೇಖನ ವ್ರತದಿಂದ ಪ್ರಾಣತ್ಯಾಗ ಪಡೆದುದಾಗಿ ಕ್ರಿ.ಶ. 7ನೇ ಶತಮಾನದ ಶ್ರವಣ ಬೆಳಗೊಳ ಶಾಸನಗಳಲ್ಲಿ ವರ್ಣಿಸಲಾಗಿದೆ. ಹರಿಸೇನ ಎಂಬ ಜೈನ ಕವಿಯ ಬೃಹತ್ ಕಥಾ ಕೋಶದಲ್ಲಿಯೂ ಈ ಘಟನೆಯನ್ನು ಸ್ಮರಿಸಲಾಗಿದೆ. ಚಂದ್ರಗುಪ್ತನು ಸಿಂಹಾಸನ ತ್ಯಾಗಮಾಡಲು ಜೈನ ಸನ್ಯಾಸಿಗಳು ತಿಳಿಸಿದ ಮುಂಬರಲಿದ್ದ 12 ವರ್ಷಗಳ ದೀರ್ಘಕಾಲದ ಕ್ಷಾಮವು ಕಾರಣವೆಂದು ಹೇಳಲಾಗಿದೆ. ಆದರೆ ಮೌರ್ಯ ಸಂತತಿಯ ಸ್ಥಾಪಕನಾದ ಚಂದ್ರಗುಪ್ತನು ಮತಾಂತರ ಹೊಂದಲಿಲ್ಲವೆಂದೂ ಹಾಗೂ ಸಿಂಹಾಸನ ತ್ಯಾಗಮಾಡಲಿಲ್ಲವೆಂದೂ ಮಿಗಿಲಾಗಿ ದೀರ್ಘದ ಕ್ಷಾಮವು ತಲೆದೋರಲಿಲ್ಲವೆಂದೂ ಸಮಕಾಲೀನ ಆಧಾರಗಳಿಂದ ತಿಳಿದು ಬರುತ್ತದೆ. ಆದ್ದರಿಂದ ಶ್ರವಣ ಬೆಳಗೊಳಕ್ಕೆ ಬಂದು ಅಲ್ಲಿ ಸಲ್ಲೇಖನ ವ್ರತದಿಂದ ಅಸುನೀಗಿ ಮೌರ್ಯ ಚಕ್ರವರ್ತಿಯು ಅಶೋಕನ ಮೊಮ್ಮಗನೂ, ಜೈನಧರ್ಮೀಯನೂ ಆದ ಸಂಪ್ರಾಂತಿ ಚಂದ್ರಗುಪ್ತನೆಂಬುವುದಾಗಿ ವಿದ್ವಾಂಸರು ನಿರ್ಧರಿಸಿದ್ದಾರೆ. ಚಂದ್ರಗುಪ್ತನೆಂಬ ಹೆಸರಿನ ಮೌರ್ಯ ಚಕ್ರವರ್ತಿ ಶ್ರವಣಬೆಳಗೊಳಕ್ಕೆ ಬಂದ ಸಂಗತಿಯನ್ನು ನಿರ್ಧರಿಸಲು ಇನ್ನೂ ಹಲವು ನಿದರ್ಶನಗಳಿವೆ. ಅವನು ಅಲ್ಲಿ ನೆಲಸಿದ್ದ ಬೆಟ್ಟಕ್ಕೆ ಚಂದ್ರಗಿರಿ ಎಂಬ ಹೆಸರು ಇಂದಿಗೂ ಇದೆ. ಅಲ್ಲದೆ ಅಲ್ಲಿ ಚಂದ್ರಗುಪ್ತ ಬಸದಿ ಎಂಬ ಹೆಸರಿನ ಮೌರ್ಯ ಚಕ್ರವರ್ತಿ ಶ್ರವಣಬೆಳಗೊಳಕ್ಕೆ ಬಂದಿದ್ದು ಅಲ್ಲಿ ಪ್ರಾಣತ್ಯಾಗ ಮಾಡಿದ ಘಟನೆ ಸಂಶಯಾಸ್ಪಧವಾಗಿ ಕಾಣಬರುವುದಿಲ್ಲ.

### 5.3.2 *ಅಶೋಕ ಚಕ್ರವರ್ತಿ ಮತ್ತು ದಖಿನ್*

ಅಶೋಕ ಚಕ್ರವರ್ತಿಯ ಆಳ್ವಿಕೆ ದಖಿನ್ ಭಾಗದ ಕರ್ನಾಟಕದ ಮೇಲೆ ಸ್ಥಾಪಿತವಾಗಿತ್ತು. ಆಭಾಗದಲ್ಲಿ ದೊರೆತಿರುವ ಶಾಸನಗಳಲ್ಲಿ ಅಶೋಕನ ಶಾಸನಗಳೇ ಪ್ರಪ್ರಥಮವಾದವು. ಅಶೋಕನ ಶಾಸನಗಳು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಂಗ ರಾಮೇಶ್ವರ, ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಕೊಪ್ಪಳದ ಬಳಿಯೂ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ, ನಿಟ್ಟೂರು, ಉಡೇಗೊಳಂ, ಗುಲ್ಬರ್ಗಾದ ಸನ್ನತಿಯಲ್ಲಿ ಶಾಸನಗಳು ದೊರೆತಿವೆ. ಅಶೋಕನ ಶಾಸನಗಳೆಲ್ಲಾ ಹೆಚ್ಚು ಮಟ್ಟಿಗೆ ಅವನ ದೇವಾನಾಂಪ್ರಿಯ ಮತ್ತು ಪ್ರಿಯದರ್ಶಿ ಎಂಬ ಬಿರುದುಗಳನ್ನು ಒಳಗೊಂಡಿದ್ದವು. ಮಸ್ಕಿಯಲ್ಲಿ ಪ್ರಪ್ರಥಮವಾಗಿ ಅಶೋಕನ ಹೆಸರನ್ನೊಳಗೊಂಡ ಶಾಸನವು ದೊರೆಯಿತು. ಇತ್ತೀಚಿನವರೆಗೂ ಇದು ಅವನ ಹೆಸರನ್ನೊಳಗೊಂಡ ಏಕಮಾತ್ರ ಮಹತ್ವದ

ಶಾಸನವಾಗಿದ್ದಿತು. ಅಶೋಕನ ಹೆಸರನ್ನೊಳಗೊಂಡ ಅವನ ಮತ್ತೊಂದು ಶಾಸನವು ಇತ್ತೀಚೆಗೆ ಸನ್ನತಿ, ನಿಟ್ಟೂರು ಎಂಬಲ್ಲಿ ದೊರೆತಿದೆ. ಮೌರ್ಯ ಸಾಮ್ರಾಜ್ಯದ ದಕ್ಷಿಣದಲ್ಲಿ ಚೋಳ ಮತ್ತು ಚೇರರಾಜ್ಯಗಳು ಬೇರೆಯಾಗಿದ್ದವೆಂದು ತಿಳಿದುಬರುತ್ತದೆ. ರಾಜಕೀಯವಾಗಿ ಅಲ್ಲದಿದ್ದರೂ ಸಂಸ್ಕೃತಿ ವ್ಯಾಪಕತೆ ದೃಷ್ಟಿಯಿಂದ ಒಪ್ಪಬಹುದಾದ ಸಂಗತಿಯಾಗಿದೆ. ಸಿಂಹಳದ ಬೌದ್ಧಗ್ರಂಥ ಮಹಾವಂಶದ ಪ್ರಕಾರ ಅಶೋಕನು ಮಹಿಷಮಂಡಲ (ಆಧುನಿಕ ಮೈಸೂರಿನ ಭಾಗ) ಮತ್ತು ಬನವಾಸಿಗೆ ಬೌದ್ಧ ಧರ್ಮವನ್ನು ಪ್ರಚಾರ ಮಾಡಲು ರಖ್ಖಿತ್ ಮತ್ತು ಮಹಾದೇವ್ ಎಂಬ ಬೌದ್ಧ ಭಿಕ್ಷುಗಳನ್ನು ಕಳುಹಿಸಿದುದಾಗಿ ತಿಳಿದು ಬರುತ್ತದೆ. ಕನ್ನಡ ನಾಡಿನ ಹಾಸನ ಜಿಲ್ಲೆ ಮತ್ತು ಇತರ ಪ್ರದೇಶಗಳಲ್ಲಿ ದೊರೆತಿರುವ ಮೋರೇರ ಅಂಗಡಿ ಎಂದು ಕರೆಯಾಲಾಗಿರುವ ಶಿಲಾ ಸ್ಮಾರಕಗಳು ಮೌರ್ಯರ ಆಳ್ವಿಕೆಯ ಸಂಕೇತವೆಂದು ಪರಿಗಣಿಸಲಾಗಿದೆ.

ಮೇಲ್ಕಂಡ ಸಾಹಿತ್ಯ ಮತ್ತು ಶಾಸನಗಳ ಆಧಾರಗಳಿಂದ ದಕ್ಷಿಣಭಾರತದ ದಖಿನ್ ಪ್ರದೇಶದ ಬಹು ಭಾಗವು ಮೌರ್ಯ ಸಾಮ್ರಾಜ್ಯದ ಭಾಗವಾಗಿತ್ತೆಂಬ ಸಂಗತಿಯು ನಮಗೆ ಮನವರಿಕೆ ಮಾಡಿಕೊಡುತ್ತದೆ. ರಾಯಚೂರು ಜಿಲ್ಲೆಯಲ್ಲಿರುವ ಕನಕಗಿರಿ ಅಥವಾ ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಜೊನ್ನಗಿರಿಯು ಅಶೋಕನ ಸುವರ್ಣಗಿರಿಯಾಗಿರಬೇಕೆಂದು ಅಭಿಪ್ರಾಯಪಡಲಾಗಿದೆ. ಸುವರ್ಣಗಿರಿಯು ಮೌರ್ಯ ಸಾಮ್ರಾಜ್ಯದ ದಕ್ಷಿಣ ಪ್ರಾಂತ್ಯದ ರಾಜಧಾನಿಯಾಗಿತ್ತೆಂದೂ ಅಲ್ಲಿನ ಪ್ರಾಂತ್ಯಾಧಿಕಾರಿಯ ಮುಖಾಂತರ ರಾಜಾಜ್ಞೆಗಳನ್ನು ಇಸಿಲದ ಮಹಾಮಾತ್ರ ಎಂಬ ಅಧಿಕಾರಿಗೆ ತಲುಪಿಸಲಾಗಿತ್ತೆಂದು ತಿಳಿದುಬರುತ್ತದೆ. ಇಸಿಲ ಪಟ್ಟಣವು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯಾಗಿತ್ತೆಂದು ಅಭಿಪ್ರಾಯ ಪಡಲಾಗಿದೆ. ಬ್ರಹ್ಮಗಿರಿ ಅಶೋಕನ ಶಾಸನದಲ್ಲಿ ಇಸಿಲದ ಉಲ್ಲೇಖವಿದೆ.

ಮೌರ್ಯರ ಆಳ್ವಿಕೆ ಕಾಲದಲ್ಲಿ ದಕ್ಷಿಣ ಭಾರತದ ಜನಜೀವನಕ್ಕೆ ಸಂಬಂಧಿಸಿದಂತೆ ನಿಕಟವಾದ ಮಾಹಿತಿ ತಿಳಿದು ಬರುವುದಿಲ್ಲ. ಆದರೆ ಉತ್ತಮವಾದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳಿದ್ದುದರಿಂದ ಮೌರ್ಯರು ಈ ಭಾಗವನ್ನು ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಂಡರೆಂದು ಊಹಿಸಬಹುದಾಗಿದೆ. ಮೌರ್ಯ ಸಾಮ್ರಾಜ್ಯದ ಇತರ ಭಾಗಗಳಲ್ಲಿದ್ದಂತ ನಾಗರೀಕತೆಯೇ ಹೆಚ್ಚು ಕಡಿಮೆ ಈ ಭಾಗದಲ್ಲೂ ಪ್ರಚಲಿತವಾಗಿತ್ತೆಂಬ ಅಂಶವನ್ನು ಮನಗಾಣಬೇಕಾಗುತ್ತದೆ. ಅಶೋಕ ಚಕ್ರವರ್ತಿ ಸುಖಿರಾಜ್ಯ ಕಲ್ಪನೆಗಳ ಕಾರ್ಯಕ್ರಮಗಳೂ ಈ ಭಾಗದಲ್ಲಿ ಜಾರಿಗೆ ಬಂದಿರಬಹುದೆಂದು ಅಭಿಪ್ರಾಯ ಪಡಲಾಗಿದೆ.

## 5.4 ಶಾತವಾಹನು - ಹಿನ್ನಲೆ

ದಖಿನ್ ಪ್ರಸ್ಥಭೂಮಿಯಲ್ಲಿ ಮೊದಲನೆ ಬಾರಿಗೆ ಸ್ವತಂತ್ರ ರಾಜ್ಯ ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ವಿಂಧ್ಯ ಪರ್ವತಗಳ ದಕ್ಷಿಣ ಭಾಗದ ಪರ್ಯಾಯ ದ್ವೀಪವನ್ನು ವೈದಿಕ ಸಾಹಿತ್ಯದಲ್ಲಿ 'ದಕ್ಷಿಣಪಥ' ಎಂದು ನಿರ್ದೇಶಿಸಲಾಗಿದೆ. "ದಕ್ಷಿಣ ಪಥ" ಎಂಬ ಪದದ ಪರ್ವತಗಳಿಂದ ಕಾವೇರಿ ನದಿಯವರೆಗಿನ ಪ್ರಸ್ಥಭೂಮಿಯನ್ನು 'ದಖಿನ್' ಎಂಬ ಹೆಸರಿನಿಂದಲೂ, ಕಾವೇರಿ ನದಿಯ ದಕ್ಷಿಣ ಭಾಗವನ್ನು 'ತಮಿಳು ನಾಡು' ಎಂಬುದಾಗಿಯೂ ಕರೆಯುವುದು ಪರಿಪಾಠವಾಗಿದೆ. ಗೌತಮಿ ಪುತ್ರ ಶಾತಕರಣಿಯು "ದಕ್ಷಿಣ ಪಥ" ಎಂಬ ಬಿರುದನ್ನು ಹೊಂದಿದ್ದನು. ಗೋದಾವರಿ, ಕೃಷ್ಣ, ತುಂಗಭದ್ರ ಹಾಗೂ ಕಾವೇರಿ ನದಿಗಳು ದಖಿನ್ ಭೂಭಾಗದ ಪ್ರಮುಖ ನದಿಗಳು. ಕ್ರಿ.ಪೂ. ಸುಮಾರು ಎರಡನೆ ಶತಮಾನದಿಂದ ಕ್ರಿ.ಶ. ಎರಡನೇ ಶತಮಾನದವರೆಗೆ ಅಸ್ತಿತ್ವದಲ್ಲಿದ್ದ ಶಾತವಾಹನರ ರಾಜ್ಯ ಪ್ರಾರಂಭದಲ್ಲಿ ಕೃಷ್ಣ, ಗೋದಾವರಿ ನದಿಗಳ ಬಯಲಿಗೆ ಸೀಮಿತವಾಗಿದ್ದರೂ ಈ ಸಂತತಿಯ ಹಲವು ಸಮರ್ಥ ರಾಜರು, ವಿಂಧ್ಯ, ಪರ್ವತದ ತಪ್ಪಲ್ಲಿನಿಂದ ತುಂಗಭದ್ರಾನದಿಯವರೆಗೆ ತಮ್ಮ ರಾಜ್ಯವನ್ನು ವಿಸ್ತರಿಸಿದರು.

ಅಶೋಕ ಚಕ್ರವರ್ತಿಯ ಮರಣದ ನಂತರ ದಖನ್ನಿನಲ್ಲಿ ಶಾತವಾಹನರು ಪ್ರಾಬಲ್ಯಕ್ಕೆ ಬಂದರು. ದಖನ್ನಿನ ಬಹುಭಾಗ ಸುಮಾರು ನಾಲ್ಕು ನೂರು ವರ್ಷಗಳಷ್ಟು ದೀರ್ಘಾವಧಿಕಾಲ ಶಾತವಾಹನರ ಆಳ್ವಿಕೆಗೊಳಪಟ್ಟಿತು. ಗೋದಾವರಿ ದಂಡೆಯ ಪ್ರತಿಷ್ಠಾನವು ಈ ಮನೆತನದ ರಾಜಧಾನಿಯಾಗಿದ್ದಿತು. ಇವರ ಇತಿಹಾಸವನ್ನು ತಿಳಿಯಲು ಹಲವು ಪುರಾಣಗಳು, ಇವರ ಕಾಲದ ಶಾಸನಗಳೂ ಮತ್ತು ನಾಣ್ಯಗಳು ಸಹಕಾರಿಯಾಗಿವೆ. ಹಾಲರಾಜನ **ಗಾಥಸಪ್ತಶತಿ** ಆಕಾಲದ ಸಾಮಾಜಿಕ ಹಾಗೂ ಧಾರ್ಮಿಕ ನೀತಿ ನಿಲುವುಗಳನ್ನು ಪರಿಚಯಿಸಿಕೊಡುತ್ತದೆ. **ಪೆರಿಪ್ಲಸ್** ಗ್ರಂಥವೂ ಹಲವಾರು ಅಮೂಲ್ಯ ಸಂಗತಿಗಳನ್ನು ವಿವರಿಸುತ್ತದೆ.

ಶಾತವಾಹನ ಮನೆತನದ ಮೂಲ, ಉಗಮ ಹಾಗೂ ಕಾಲಾನುಕ್ರಣಿಕೆಗೆ ಸಂಬಂಧಿಸಿದಂತೆ ವಿಭಿನ್ನ ಹೇಳಿಕೆಗಳು ಪ್ರಚಲಿತವಾಗಿವೆ. ಈ ಮನೆತನ 'ಶಾಲಿವಾಹನ' ಮತ್ತು 'ಆಂಧ್ರ' ಎಂಬ ಹೆಸರುಗಳಿಂದಲೂ ನಿರ್ದೇಶಿತವಾಗಿದೆ. ಆಂಧ್ರರಿಗೆ ಸಂಬಂಧಿಸಿದ ಅತ್ಯಂತ ಪ್ರಾಚೀನವಾದ ಹೇಳಿಕೆ ಐತ್ತರೀಯ ಬ್ರಾಹ್ಮಣದಲ್ಲಿ ದೊರೆಯುತ್ತದೆ. ಇವರು ಉತ್ತರದಿಂದ ಬಂದು ವಿಂಧ್ಯ ಪ್ರದೇಶದ ದಕ್ಷಿಣಭಾಗದಲ್ಲಿ ಬಂದು ನೆಲಸಿ ಆಂಧ್ರ, ಪುಳಿಂದ ಮೊದಲಾದ ಹೆಸರುಗಳಿಂದ ಪ್ರಸಿದ್ಧರಾದರೆಂದೂ ಹಾಗೂ ಈ ಪ್ರದೇಶದಲ್ಲಿ ಆರ್ಯರು ಆಗ ಇನ್ನೂ ನೆಲಸಿರಲಿಲ್ಲವೆಂದೂ, ಅಲ್ಲಿ ಕೇವಲ ದಸ್ಯು ಅಥವಾ ದ್ರಾವಿಡ ಪಂಗಡದ ಜನರು ವಾಸಿಸುತ್ತಿದ್ದರೆಂದು ಐತ್ತರೀಯ ಬ್ರಾಹ್ಮಣ ಸೂಚಿಸುತ್ತದೆ. ಮೌರ್ಯ ಸಾಮ್ರಾಜ್ಯದ ಉನ್ನತಿಯ ಕಾಲದಲ್ಲಿ ಆಂದ್ರರು ಅವರ ಸಾಮಂತರಾದರು. ಅಶೋಕನ 13ನೇ ಬಂಡೆ ಶಾಸನದ ಪ್ರಕಾರ ಆಂಧ್ರನಾಡು ಮೌರ್ಯ ಸಾಮ್ರಾಜ್ಯದ ಭಾಗವಿಗಿದ್ದಿತು.

ಪುರಾಣಗಳು ಶಾತವಾಹನರನ್ನು ಆಂಧ್ರಭೃತ್ಯರೆಂದು ಹೆಸರಿಸಿವೆ. ಈ ಮನೆತನದ ರಾಜರು ತಮ್ಮ ಶಾಸನಗಳಲ್ಲಿ ಶಾತವಾಹನ ಕುಲದವರೆಂದೂ, ದಕ್ಷಿಣ ಪಥದ ಸ್ವಾಮಿಗಳೆಂದು ಕರೆದು ಕೊಂಡಿದ್ದಾರೆ. ಪುರಾಣಗಳ ಹೇಳಿಕೆಯ ಪ್ರಕಾರ ಶಾತವಾಹನರು ಆಂಧ್ರದಲ್ಲಿ ಆಳುತ್ತಿದ್ದ ರಾಜ ಮನೆತನದವೊಂದರ ಸೇವಕರಾಗಿದ್ದಿರಬಹುದೆಂದು ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಈ ಅಭಿಪ್ರಾಯ ಸಾಧುವಾದುದಲ್ಲವೆಂದೂ ಅವರು ಮೌರ್ಯ ಸಂತತಿಯ ಅಧೀನರಾಗಿದ್ದುದರ ಸಂಕೇತವಾಗಿ ಪುರಾಣಗಳು ಆಂಧ್ರಭೃತ್ಯರೆಂದು ಕರೆದಿವೆಯೆಂದೂ ಕೆಲವು ವಿದ್ವಾಂಸರು ನಂಬಿರುವರು. ಶಾತವಾಹನರು ಮೂಲತ 'ಶಾತಹನಿಹರ'ಎಂದು ಹೆಸರಾಗಿದ್ದ ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯವರೆಂದೂ, ಅವರು ಪ್ರಾರಂಭದಲ್ಲಿ ಆಂಧ್ರರ ಆಧೀನರಾಗಿ ಆಳುತ್ತಿದ್ದು, ಕ್ರಮೇಣ ತಮ್ಮ ಸಾರ್ವಭೌವತ್ವವನ್ನು ಇಡೀ ದಖನ್ ಪ್ರದೇಶದ ಮೇಲೆ ಸ್ಥಾಪಿಸಿದರೆಂದೂ ಇನ್ನೂ ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. 'ಶಾತವಾಹನ'ಎಂಬ ಪದ ಕುಲಸೂಚಕವೆಂದೂ, ಈ ಕುಲದ ಮುಖ್ಯನಿಂದ ಈ ಹೆಸರು ಬಂದಿತ್ತೆಂದೂ ' ಆಂಧ್ರ'ಎಂಬ ಪದ ಜಾತಿ ಸೂಚಕವೆಂದೂ ಹಾಗೂ 'ಶಾತವಾಹನ'ಮತ್ತು 'ಶಾತಕರ್ಣಿ'ಎಂಬುವುದು ದ್ರಾವಿಡ ಸಂಕೇತವಾದ ಹೆಸರುಗಳೆಂದು ಪ್ರಚಲಿತವಾಗಿದೆ.

ಶತ ಮತ್ತು ಶದ ಪದಗಳು ಕುದುರೆಗೆ ಸಂಬಂಧಿಸಿದೆ ಎಂದು ಅಜಯ ಮತ್ತು ಶಾಸ್ತ್ರಿ ಹೇಳುತ್ತಾರೆ. ಜುನ್ನಾರ ಶಾಸನ, ಇವರ ಅತ್ಯಂತ ಹಳೆಯ ಶಾಸನವಾಗಿದ್ದು, ಅದರಲ್ಲಿ ಶತವಾಹನ ಎಂಬ ಪದ ಬಳಕೆ ಇವರನ್ನು ಸೂಚಿಸುತ್ತದೆ. ಮುಂದೆ ಗೌತಮಿಪುತ್ರನ ಪ್ರಾಬಲ್ಯ ಬೆಳೆದ ಮೇಲೆ ಇವರು ತಮ್ಮನ್ನು ಶಾತಾವಾಹನರೆಂದು ಕರೆದು ಕೊಂಡಿರಲು ಸಾಧ್ಯ ಹಾಗೂ ದಕ್ಷಿಣದ ಬೃಹತ್ ಶಿಲಾಗೋರಿಗಳಲ್ಲಿ ಅಶ್ವಗಳ ಅಸ್ತಿಗಳು ದೊರೆತಿವೆ. ಈ ಗೋರಿಗಳ ವಾಲೀಕರು ಅಶ್ವಾರೋಹಿಗಳಾಗಿರಲು ಸಾಧ್ಯ ಹಾಗೂ ಅವರೇ ಮುಂದೆ ಶಾತವಾಹನರಾಗಿರಲು ಸಾಧ್ಯ ಎಂದು ಭಾವಿಸಬಹುದು.

## 5.5 ಸಂಕ್ಷಿಪ್ತ ರಾಜಕೀಯ ಇತಿಹಾಸ

ಸೀಮುಖ (ಶ್ರೀಮುಖ, ಸಿಶುಕ)ಶಾತವಾಹನ ಸಂತತಿಯ ಸ್ಥಾಪಕ. ಈತನು ಕಿ.ಪೂ. 230 ರ ಸುಮಾರಿನಲ್ಲಿ ಮೌರ್ಯ ಸಾಮ್ರಾಜ್ಯದ ಅಧೀನತೆಯಲ್ಲಿ ತೊಡೆದು ಹಾಕಿ ಸ್ವತಂತ್ರ ರಾಜನಾದನು. ಸೀಮುಖನು 23 ವರ್ಷಗಳ ಕಾಲ ಆಳಿದನು. ನಾನೆಘಾಟ್ ಬಳಿ ದೊರಕಿರುವ ಶಾಸನವೊಂದು ಈತನನ್ನು 'ರಾಜಸೀಮುಖ ಶಾತವಾಹನ'ಎಂಬುದಾಗಿ ಹೆಸರಿಸುತ್ತದೆ. ಪೈಠಣ (ಪ್ರತಿಷ್ಠಾನ) ಪಟ್ಟಣ ಈತನ ರಾಜಧಾನಿಯಾಗಿತ್ತು. ಇವನ ಮರಣದ ತರುವಾಯ ಇವನ ತಮ್ಮ ಕೃಷ್ಣ ರಾಜನಾದ. ಇವನು ಹತ್ತು ವರ್ಷಗಳ ಕಾಲ ಆಳ್ವಿಕೆ ನಡೆಸಿ ರಾಜ್ಯವನ್ನು ನಾಸಿಕದವರೆಗೂ ವಿಸ್ತರಿಸಿದನು. ಕೃಷ್ಣನ ತರುವಾಯ ಒಂದನೇ ಶಾತಕರ್ಣಿ ರಾಜನಾಗಿ ಕ್ರಿ.ಪೂ. 202 ರಿಂದ 192 ರವರೆಗೂ ಆಳಿದನು. ಇವನು ವಿಂಧ್ಯ ಪರ್ವತಗಳ ಪ್ರದೇಶದಿಂದ ಕೊಂಕಣದವರೆಗೂ ರಾಜ್ಯ ವಿಸ್ತರಿಸಿ 'ದಕ್ಷಿಣಾಪಥದ ಸಾರ್ವಭಾಮ' ಎಂಬ ಬಿರುದನ್ನು ಧರಿಸಿದನು. ಇವನು ತನ್ನ ಸಾರ್ವಭೌಮತ್ವದ ಕುರುಹಾಗಿ ಅಶ್ವಮೇಧ ಯಾಗವನ್ನು ಆಚರಿಸಿದನು. ಇವನ ತರುವಾಯ ಸ್ವಲ್ಪ ಕಾಲದವರೆಗೆ ಶಾತವಾಹನರು ಅಷ್ಟು ಪ್ರಬಲರಾಗಿರಲಿಲ್ಲವೆಂದು ತಿಳಿದುಬರುತ್ತದೆ. ಬಹುಶಃ ಶಕಕ್ಷತ್ರಪರ ಪ್ರಾಬಲ್ಯದಿಂದಾಗಿ ಶಾತವಾಹನ ಅಧಿಕಾರ ಕ್ಷೀಣಿಸಿದಂತೆ ತೋರುತ್ತದೆ. ಶಾತವಾಹನ ರಾಜ್ಯದ ಉತ್ತರ ಭಾಗಗಳು ಕೈಬಿಟ್ಟು ಹೋದವು. ಆಕಾಲದಲ್ಲಿ ಆಳಿದ ಹಲವಾರು ಶಾತವಾಹನ ರಾಜರ ಹೆಸರುಗಳು ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಗಾಥಸಪ್ತಶತಿಯ ಕರ್ತೃವಾದ ಹಾಲ ರಾಜನೂ ಆಕಾಲಕ್ಕೆ ಸೇರಿದವನೆಂದು ತಿಳಿದು ಬರುತ್ತದೆ.

ಕ್ರಿ.ಶ. 106 ರಿಂದ 130 ರವರೆಗೆ ಆಳಿದ ಗೌತಮೀಪುತ್ರಿ ಶಾತಕರಣಿಯು ಪುನಃ ಶಾತವಾಹನರ ಪ್ರಾಬಲ್ಯವನ್ನು ಸ್ಥಾಪಿಸಿದನು. ಶಕರು, ಯವನರು ಮತ್ತು ಕ್ಷಹರಾಟರನ್ನು ಸದೆಬಡಿದ ಸಾಹಸಿಯೆಂಬುದಾಗಿ ಶಾಸನಗಳಲ್ಲಿ ಇವನನ್ನು ವರ್ಣಿಸಲಾಗಿದೆ. ಕೊಂಕಣ, ಸೌರಾಷ್ಟ್ರ, ಮಾಳವ, ಬೀರಾರ್ ಪ್ರದೇಶಗಳನ್ನು ಗೆದ್ದು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡನು. ಶಾತವಾಹನರ ಕೀರ್ತಿಯನ್ನು ಪುನರ್ ಪ್ರತಿಷ್ಠಾಪಿಸಿದವನು ಹಾಗೂ ತ್ರಿಸಮುದ್ರ ತೋಯ ಪೀತವಾಹನ ಅಥವಾ ಮೂರು ಸಮುದ್ರಗಳ ನೀರನ್ನು ಕುಡಿದ ಕುದುರೆಗಳನ್ನು ವಾಹನವಾಗಿ ಹೊಂದಿದವನು ಎಂಬುದಾಗಿ ಇವನನ್ನು ಶಾಸನಗಳಲ್ಲಿ ವರ್ಣಿಸಲಾಗಿದೆ. ಈತನ ಮಗನಾದ ವಶಿಷ್ಟ ಪುತ್ರ ಪುಲಮಾಯಿ ಮತ್ತೊಬ್ಬ ಪ್ರಸಿದ್ಧ ಶಾತವಾಹನ ಚಕ್ರವರ್ತಿ. ನಾಸಿಕ್‌ನಲ್ಲಿ ದರೆತಿರುವ ಇವನ ಶಾಸನವು ಈ ಸಂತತಿಯ ಪ್ರಮುಖ ದಾಖಲೆಗಳಲ್ಲೊಂದಾಗಿದೆ. ಇವನ ರಾಜ್ಯವು ಕೃಷ್ಣಾ ನದಿಯ ಮುಖಜ ಭೂಮಿಯವರೆಗೂ ವಿಸ್ತರಿಸಿತು. ಇವನ ತರುವಾಯ ಆಳಿದ ಯಜ್ಞ ಶ್ರೀಶಾತಕರಣಿಯು ಶಕಕ್ಷತ್ರಪರನ್ನು ಸೋಲಿಸಿ ಅವರ ನಾಣ್ಯಗಳ ಮೇಲೆ ತನ್ನ ರಾಜ ಚಿಹ್ನೆಯನ್ನು ಟಂಕಿಸಿದನು. ಇವನ ತರುವಾಯ ಶಾತವಾಹನ ಸಾಮ್ರಾಜ್ಯವು ಕ್ಷೀಣಿಸಿ ಒಡೆದು ಹೋಯಿತು. ಒಂದು ಶತಮಾನದ ತರುವಾಯ ಕರ್ನಾಟಕದ ಉತ್ತರ ಭಾಗದಲ್ಲಿ ಕದಂಬ ಮನೆತನವೂ, ದಕ್ಷಿಣದಲ್ಲಿ ತಲಕಾಡು ಗಂಗ ಸಂತತಿಯೂ ಸ್ಥಾಪಿತವಾದವು.

ಶಾತವಾಹನರ ಆಳ್ವಿಕೆ ಕಾಲದಲ್ಲಿ ಉತ್ತರ ಮತ್ತು ದಕ್ಷಿಣ ಭಾರತದ ಆಚಾರ ವಿಚಾರ, ವ್ಯವಹಾರ, ನಡೆನುಡಿ, ಆಡಳಿತ, ಕಲೆ, ಧರ್ಮ ಮೊದಲಾದವುಗಳಲ್ಲಿ ಅಖಂಡತೆಯುಂಟಾಯಿತು. ಶಾತವಾಹನರ ಉದಾರ ಧಾರ್ಮಿಕ ನೀತಿಯ ಪರಿಣಾಮವಾಗಿ ದಖ್ಖನ್ನಿನಲ್ಲಿ ವೈದಿಕ, ಬೌದ್ಧ ಮತ್ತು ಜೈನ ಮತಗಳು ಪ್ರಚಾರವಾಗಿ ಉತ್ತಮ ಸ್ಥಿತಿಯಲ್ಲಿದ್ದವು. ದೀರ್ಘ ಕಾಲ ಆಳ್ವಿಕೆ ನಡೆಸಿದ ಈ ಸಂತತಿಯು ದಕ್ಷಿಣ ಭಾರತದ ಆಡಳಿತ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳ ಮೇಲೆ ವಿಶೇಷ ಪ್ರಭಾವವನ್ನು ಬೀರಿದೆ.

ಮೌರ್ಯ ಸಾಮ್ರಾಟರು ಸ್ಥಾಪಿಸಿದ ಆಡಳಿತ ಪದ್ಧತಿಯನ್ನೇ ಹೋಲುವ ಆಡಳಿತ ಯಂತ್ರವನ್ನು ದಖ್ಖನ್ನಿನಲ್ಲಿ ಶಾತವಾಹನರು ಆಚರಣೆಗೆ ತಂದರು. ಮೌರ್ಯರ ಆಳ್ವಿಕೆಯಲ್ಲಿದ್ದಂತೆ ಸಾಮ್ರಾಜ್ಯವನ್ನು ಪ್ರಾಂತ ಅಥವಾ ಅಹರಗಳನ್ನಾಗಿಯೂ, ಅಹರಗಳನ್ನು ಚಿಕ್ಕ ಚಿಕ್ಕ

ವಿಭಾಗಗಳನ್ನಾಗಿಯೂ ವಿಂಗಡಿಸಿ ಗ್ರಾಮಾಡಳಿತ ಪದ್ಧತಿಯನ್ನು ಆಚರಣೆಗೆ ತಂದಿದ್ದರು. ಇವರ ಶಾಸನಗಳಲ್ಲಿ ಯುವರಾಜ, ಅಮಾತ್ಯ, ಸೇನಾಧಿಪತಿ, ಲೇಖಿಕ ಮೊದಲಾದ ಅನೇಕ ಅಧಿಕಾರಿಗಳನ್ನು ಹೆಸರಿಸಲಾಗಿದೆ. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಪಟ್ಟಣಗಳು ಅಸ್ತಿತ್ವದಲ್ಲಿದ್ದವು. ಅವುಗಳಲ್ಲಿ ಸೋಪಾರ, ಕಲ್ಯಾಣ, ಜುನ್ನರ, ಕಾರ್ಲೆ, ಗೋವರ್ಧನ ಮೊದಲಾದವು ಪ್ರಮುಖವಾದವು. ಇವುಗಳ ಆಡಳಿತಕ್ಕಾಗಿ ನಿಗಮ ಸಭೆಗಳಿದ್ದವೆಂದು ತಿಳಿದು ಬರುತ್ತದೆ.

## 5.6 ಶಾತವಾಹನ ಕಾಲದಲ್ಲಿ ಸಮಾಜ ಮತ್ತು ಸಂಸ್ಕೃತಿ

ಈ ಉಪ ಅಧ್ಯಯನದಡಿಯಲ್ಲಿ ಮೂರು ವಿಷಯಗಳನ್ನು ಕುರಿತು ಅಧ್ಯಯನಿಸಬೇಕಾಗುತ್ತದೆ; ಸಾಮಾಜಿಕ ಮತ್ತು ಆರ್ಥಿಕ ಜೀವನ;ಧಾರ್ಮಿಕ ಪರಿಸ್ಥಿತಿ ಮತ್ತು ಕಲೆ

### *5.6.1 ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ*

ಶಾತವಾಹನ ಕಾಲದಲ್ಲಿ ಉತ್ತರ ಭಾರತದಲ್ಲಿ ಆಚರಣೆಯಲ್ಲಿದ್ದ ಚತುರ್ವಣ ಪದ್ಧತಿ ಯಥಾವತ್ತಾಗಿ ದಖಿನ್ ಮತ್ತು ದಕ್ಷಿಣ ಭಾರತ ಸಮಾಜದಲ್ಲಿ ಆಚರಣೆಗೆ ಬಂದಿತು ಎಂಬ ಪರಿಪಾಠವನ್ನು ಇತ್ತೀಚಿನ ಸಂಶೋಧನೆಗಳಿಂದ ನಿರಾಕರಿಸಲಾಗಿದೆ. ವೈದಿಕ ಬ್ರಾಹ್ಮಣವರ್ಗ ಮತ್ತು ಬಹುಸಂಖ್ಯಾತ ಶೂದ್ರವರ್ಗದ ಧೃವಿಕರಣವಾಗಿರುವುದು ತೋರಿಬರುತ್ತದೆ. ಉತ್ತರ ಭಾರತ ಸಮಾಜದಲ್ಲಿದ್ದಂತಹ ಅನುವಂಶೀಕ ಕ್ಷತ್ರಿವರ್ಣ ರೂಪಗೊಳ್ಳಲಿಲ್ಲ. ಆದರೆ ಶೂದ್ರ ವರ್ಣಕ್ಕೆ ಸೇರಿದ ಬಲಿಷ್ಠ ವ್ಯಕ್ತಿಗಳು ಅಥವಾ ಕೆಲವು ಕುಟುಂಬಗಳು, ಕೆಲವು ಸಂದರ್ಭದಲ್ಲಿ ಜಾತಿ ಅಥವಾ ಬುಡಕಟ್ಟಿಗೆ ಸೇರಿದವರು ವೈದಿಕ ಸಂಸ್ಕಾರ ಪ್ರಕ್ರಿಯೆ ಪಡೆದು ಆಳುವ ವರ್ಗವಾಗಿ ರೂಪಗೊಂಡಿರುವುದು ಕಂಡು ಬರುತ್ತದೆ. ಶಾತವಾಹನರ ಕಾಲದಲ್ಲಿ ವೈದಿಕ ಬ್ರಾಹ್ಮಣರ ಜತೆಗೆ, ಬೌದ್ಧಮತೀಯರು, ಜೈನಮತಿಯರು ಪ್ರತಿಷ್ಠಿತ ಸುಶಿಕ್ಷಿತ ವರ್ಗಗಳಾಗಿ ಉದಯಿಸಿರುವುದನ್ನು ಕಾಣಬಹುದು. ಈ ಮೂರು ವರ್ಗಗಳು ರಾಜಾಶ್ರಯಕ್ಕೆ ಒಳಗಾಗಿದ್ದವು.

ವೃತ್ತಿ ಸಂಘಗಳನ್ನು ಸ್ಥಾಪಿಸಿಕೊಂಡಿದ್ದರು. ಆ ವೃತ್ತಿ ಸಂಘಗಳನ್ನು ಶಾಸನಗಳಲ್ಲಿ 'ಶ್ರೇಣಿ' ಎಂಬ ಹೆಸರಿನಿಂದ ಕರೆಯಲಾಗಿದೆ. 'ಶ್ರೇಣಿಧರ್ಮ'ಎಂಬ ತಮ್ಮದೇ ಆದ ಕಾನೂನುಗಳನ್ನು ರಚಿಸಿಕೊಂಡು ಅನೇಕ ಪ್ರಜಾಹಿತ ಕಾರ್ಯಗಳನ್ನು ಅವು ನೆರವೇರಿಸುತ್ತಿದ್ದವು. ತಮ್ಮ ವತಿಯಿಂದ ಈ ಸಂಘಗಳು ತೋಪುಗಳನ್ನು ಬೆಳೆಸುತ್ತಿದ್ದುದಲ್ಲದೆ **ಬೌದ್ಧ ಭಿಕ್ಷುಗಳಿಗೂ** ಶ್ರವಣರಿಗೂ ಗುಹಾಲಯಗಳನ್ನು ನಿರ್ಮಿಸಿಕೊಡುತ್ತಿದ್ದವು. ಈ ಸಂಘಗಳು ಆಧುನಿಕ ಬ್ಯಾಂಕುಗಳಂತೆ ದತ್ತಿಗಳನ್ನು ಸ್ವೀಕರಿಸಿ ಬಡ್ಡಿ ಹಣದಿಂದ ದಾನ ಕಾರ್ಯಗಳನ್ನು ಮಾಡುತ್ತಿದ್ದನು.

ಶಾತವಾಹನರ ಶಾಸನಗಳು ಗ್ರೀಕರ ಬರವಣಿಗೆಗಳು ಮತ್ತು ನಾಣ್ಯಗಳು ಆ ಕಾಲದ ಸಾಮಾಜಿಕ ಆರ್ಥಿಕ ಸ್ಥಿತಿಗಳನ್ನು ಚಿತ್ರಿಸಿಕೊಳ್ಳಬಹುದು. ಇವರ ಸಾಮ್ರಾಜ್ಯದಲ್ಲಿ 30 ದೊಡ ನಗರಗಳಿದ್ದುದಾಗಿಯೂ ಅವುಗಳು ವಾಣಿಜ್ಯ ಕೇಂದ್ರಗಳಾಗಿದ್ದವೆಂದು ತಿಳಿದು ಬರುತ್ತದೆ. ಸುಗಂಧ ದ್ರವ್ಯಗಳು ಹತ್ತಿಯ ನವುರಾದ ಬಟ್ಟೆಗಳು ಮೆಣಸು ಮುಂತಾದ ಸಾಂಬಾರ ಪದಾರ್ಥಗಳು ರೋಂ ಮತ್ತು ಇತರ ದೇಶಗಳಿಗೆ ರಫ್ತಾಗುತ್ತಿದ್ದವು. ತಾಮ್ರ, ತವರ, ಸೀಸ, ಮಧ್ಯ, ಗಾಜು ಮೊದಲಾದ ವಸ್ತುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ರೋಮನ್ನರ ಚಿನ್ನದ ನಾಣ್ಯಗಳು ದಖನ್ನಿನ ಹಲವಾರು ಸ್ಥಳಗಳಲ್ಲಿ ದೊರೆತಿವೆ. ಕಡಲ ತೀರದಲ್ಲಿದ್ದ ಹಡಗುಕಟ್ಟೆಗಳು ಸದಾ ಕಾಲದಲ್ಲಿಯೂ ಕಾರ್ಯನಿರತವಾಗಿದ್ದವು.

ಶಾತವಾಹನರ ನಾಣ್ಯಗಳು ಹೆಚ್ಚು ಸಂಖ್ಯೆಯಲ್ಲಿ ದೊರೆತಿವೆ. ಸೀಸ, ತಾಮ್ರ ಮತ್ತು ಬೆಳ್ಳಿಯ ನಾಣ್ಯಗಳನ್ನು ಅವರು ಅಚ್ಚು ಹಾಕಿಸಿದ್ದರು. ಮಹಾರಾಷ್ಟ್ರದ ಜೋಗಲ್ ತಂಬಿ ಎಂಬ ಸ್ಥಳದಲ್ಲಿ ಹೆಚ್ಚು ನಾಣ್ಯಗಳು ದೊರೆತಿವೆ. ಅವರ ನಾಣ್ಯಗಳ ಮೇಲೆ ಇತರ ಚಿಹ್ನೆಗಳ ಜೊತೆಗೆ ಹಡಗು ಮುದ್ರೆಯು ಇದೆ. ಹಲವು ನಾಣ್ಯಗಳ ಮೇಲೆ ರಾಜರ ಹೆಸರುಗಳೂ ಇವೆ. ಇತ್ತೀಚೆಗೆ

ಬನವಾಸಿಯಲ್ಲಿ ಉತ್ಖನನ ನಡೆಸಿದಾಗ ಗೌತಮೀ ಪುತ್ರ ಶಾತಕರಣಿ ಮತ್ತು ಯಜ್ಞಶ್ರೀ ಶಾತಕರಣಿ ಇವರ ನಾಣ್ಯಗಳು ದೊರೆತಿವೆ. ಶಾತವಾಹನರ ಕಾಲದಲ್ಲಿ ದಖಿನ್ ಮತ್ತು ಪಶ್ಚಿಮ ಹಾಗೂ ಆಗ್ನೇಯ ರಾಷ್ಟ್ರಗಳೊಡನೆ ಸಮೃದ್ಧವಾದ ವಾಣಿಜ್ಯ ಸಂಬಂಧವನ್ನು ಹೊಂದಿದ್ದರು. ಬ್ರಾಹ್ಮಣರು ವೇದಾಧ್ಯಾಯನ, ಹವನ ಹೋಮಾಧಿ ಕರ್ಮಗಳನ್ನು ನೆರವೇರಿಸುತ್ತಿದ್ದರಿಂದ ವಿಶೇಷ ಮನ್ನಣೆ ಪಡೆದಿದ್ದರು. ಶಾತವಾಹನ ರಾಜರು ಬ್ರಾಹ್ಮಣ ಸಂರಕ್ಷಕರೆಂಬುದಾಗಿ ಕರೆದುಕೊಂಡಿದ್ದಾರೆ. ಆಳುವ ಅರಸು ವರ್ಗಕ್ಕೆ ಸೀರಿದವರು ಯುದ್ಧ ಕಲೆಯಲ್ಲಿ ನಿರತರಾಗಿದ್ದರು. ವೈಶ್ಯಕರು ವ್ಯಾಪಾರ ಕಸುಬುಗಳಲ್ಲಿ ತೊಡಗಿದ್ದರು. ಅವೈದಿಕ ಅನಾರ್ಯ ಪಂಗಡಕ್ಕೆ ಸೇರಿದ ಬಹುಸಂಖ್ಯಾತ ಶ್ರೀಸಾಮಾನ್ಯ ವರ್ಗದವರು ಬಗೆ ಬಗೆ ಉಪಕಸುಬುಗಳಲ್ಲಿ ಪರಿಣಿತಿ ಹೊಂದಿದ್ದರು. ನೂಲುವುದು, ನೇಯುವುದು, ತೈಲೋತ್ಪಾದನೆ, ಲೋಹಗಳಿಂದ ಪದಾರ್ಥಗಳ ತಯಾರಿಕೆ, ಬಡಗಿ ಕೆಲಸ ಮೊದಲಾದ ಉಪಕಸುಬುಗಳನ್ನು ಜನರು ಅವಲಂಬಿಸಿದ್ದರು. ಶಾತವಾಹನ ಕಾಲದಲ್ಲಿ ವ್ಯಾಪಾರ ಮತ್ತು ವ್ಯವಸಾಯ ಲಾಭದಾಯಕವಾದ ವೃತ್ತಿಗಳಾಗಿದ್ದವು. ಬೌದ್ಧ ಭಿಕ್ಷುಗಳು, ಜೈನ ಯತಿಯರು, ಶ್ರೀಸಾಮಾನ್ಯ ವರ್ಗದ ಜನರ ಜೀವನವನ್ನು ಸುಧಾರಿಸಲು ವಿಶೇಷ ಮಾನವೀಯ ಆಸಕ್ತಿ ವಹಿಸುತ್ತಿದ್ದರು. ಅವಿಭಕ್ತ ಕುಟುಂಬ ಪದ್ಧತಿ ಹೆಚ್ಚು ವ್ಯಾಪ್ತಿಯಲ್ಲಿದ್ದಿತು. ಪ್ರತಿಷ್ಠಿತ ವರ್ಗಕ್ಕೆ ಸೇರಿದ ಸ್ತ್ರೀಯರು ದಾನಧರ್ಮ ಕಾರ್ಯಗಳಲ್ಲಿ ಹೆಚ್ಚು ಆಸಕ್ತವಹಿಸುತ್ತಿದ್ದರು. ಜನರ ಉಡಿಗೆ-ತೊಡಿಗೆಗಳನ್ನರಿಯಲು ಶಾತವಾಹನ ಕಾಲದ ಚಿತ್ರಕಲೆ ಹೆಚ್ಚ ಸಹಕಾರಿಯಾಗಿವೆ. ಗಂಡಸರು ತಲೆಗೆ ಮುಂಡಾಸು ಸುತ್ತಿಕೊಳ್ಳುತ್ತಿದ್ದರು. ಓಲೆ, ಬಳೆ, ಕತ್ತಿನ ಆಭರಣಗಳನ್ನು ಗಂಡಸರು ಮತ್ತು ಹೆಂಗಸರು ಧರಿಸುತ್ತಿದ್ದರು. ಮೂಗುತಿ, ಬಂದಿ ಮತ್ತು ಕಾಲಂದಿಗಳನ್ನು ಹೆಂಗಸರು ಮಾತ್ರ ಧರಿಸುತ್ತಿದ್ದರು.

ಶಾತವಾಹನ ಸಾಮ್ರಾಜ್ಯದಲ್ಲಿ ಗುಡಿ ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ಸಮರ್ಪಕವಾಗಿ ಏರ್ಪಟ್ಟಿದ್ದವು. ಕುಶಲಕಲೆ ಮತ್ತು ಇತರ ಉಪಕಸುಬುಗಳನ್ನು ಅವಲಂಬಿಸಿದ್ದ ಜನರು ಪ್ರಗತಿಪರ ಸಂಸ್ಥೆಗಳನ್ನು ರೂಪಿಸಿಕೊಂಡಿದ್ದರು. ಕುಂಬಾರರು, ತೈಲೋತ್ಪಾದಕರೂ, ಬುಟ್ಟಿಗಳ ತಯಾರಕರೂ, ಒಡವೆಗಳನ್ನು ತಯಾರಿಸುವವರೂ, ದವಸ ಧಾನ್ಯಗಳ ವಹಿವಾಟುಗಳಲ್ಲಿ ತೊಡಗಿದ್ದ ವರ್ತಕರು ತಮ್ಮ ತಮ್ಮ ಸಂಪರ್ಕವು ಸ್ಥಾಪಿತವಾಗಿತ್ತು. ಆದ್ದರಿಂದಲೇ ರೋಮನ್ನರ ನಾಣ್ಯಗಳು ಹೆಚ್ಚು ಸಂಖ್ಯೆಯಲ್ಲಿ ದಕ್ಷಿಣ ಭಾರತದಲ್ಲಿ ದೊರೆತಿವೆ.

### *5.6.2 ಧಾರ್ಮಿಕ ಪರಿಸ್ಥಿತಿ*

ಶಾತವಾಹನ ಸಂತತಿಯ ಸ್ಥಾಪನೆಗೆ ಮೊದಲು ದಖನ್ನಿನ ನಿವಾಸಿಗಳು ಗ್ರಾಮದೇವತೆ, ನಾಗ, ಶಕ್ತಿಪೂಜೆ ಮತ್ತು ಹಲವು ವೃಕ್ಷಗಳನ್ನು ಪೂಜಿಸುವ ಪದ್ಧತಿಯನ್ನು ಅನುಸರಿಸುತ್ತಿದ್ದರೆ, ಮಾದಕ ಪದಾರ್ಥಗಳ ಸೇವನೆ, ಹಾಡು ಮತ್ತು ಕುಣಿತಗಳು, ಧಾರ್ಮಿಕ ಆಚರಣೆಯ ಅಂಗ ವಿಧಿಗಳಾಗಿದ್ದವು. ಕ್ರಮೇಣ ವೈದಿಕ, ಜೈನ ಮತ್ತು ಬೌದ್ಧ ಮತಗಳು ಅಲ್ಲಿ ಪ್ರಸಾರವಾಗಿ ಜನಪ್ರಿಯವಾಗತೊಡಗಿದ್ದವು. ಶಾತವಾಹನ ಸಾಮ್ರಾಜ್ಯದಲ್ಲಿ ಮೇಲ್ಕಂಡ ಮೂರು ಧರ್ಮಗಳು ಪ್ರಬಲವಾಗಿದ್ದವು. ಹಲವು ಶಾತವಾಹನ ರಾಜರು ವೈದಿಕ ಪಂಥದ ಅನುಯಾಯಿಗಳಾಗಿದ್ದರು. ಅವರಲ್ಲಿ ಅನೇಕರು ಅಶ್ವಮೇಧ, ರಾಜಸೂಯ ಮೊದಲಾದ ಯಾಗಗಳನ್ನು ಆಚರಿಸಿದರು. ಎರಡನೆಯ ಶಾತಕರ್ಣಿ ಬ್ರಾಹ್ಮಣರಿಗೆ ಗೋವುಗಳನ್ನು, ಭೂಮಿಯನ್ನು ಮತ್ತು ವಿಶೇಷ ದಕ್ಷಿಣೆಯನ್ನು ದಾನ ಮಾಡಿದುದಾಗಿ ಆತನ ನಾನೆಘಟ್ ಶಾಸನದಿಂದ ತಿಳಿದು ಬರುತ್ತದೆ. ಅನೇಕ ಶಾಸನಗಳಲ್ಲಿ ಇಂದ್ರ, ಸಂಕರ್ಷಣ, ವಾಸುದೇವ, ಚಂದ್ರ, ಸೂರ್ಯ, ಯಮ, ವರುಣ ಮತ್ತು ಕುಬೇರ ಮೊದಲಾದ ದೇವತೆಗಳನ್ನು ಸ್ಮರಿಸಲಾಗಿದೆ. ಹಾಲರಾಜನ **ಗಾಥಸಪ್ತಶತಿಯಲ್ಲಿ** ಪಶುಪತಿ ಮತ್ತು ಗೌರಿ, ರುದ್ರ ಮತ್ತು ಪಾರ್ವತಿ, ಲಕ್ಷ್ಮಿ ಮತ್ತು ನಾರಾಯಣ ದೇವತೆಗಳನ್ನು ಸ್ಮರಿಸಲಾಗಿದೆ. ಪೌರಾಣಿಕ, ವೈದಿಕ ಮತವು ದಖನ್ನಿನಲ್ಲಿ ಹಬ್ಬಿದುದಾಗಿ ಮೇಲ್ಕಂಡ ದೇವತೆಗಳ ಆರಾಧನೆಯಿಂದ ಸ್ಪಷ್ಟವಾಗುತ್ತದೆ. **ರಾಮಾಯಣ-ಮಹಾಭಾರತ** ಮಹಾಕಾವ್ಯಗಳು ಮತ್ತು ಪುರಾಣಗಳು ಶಾತವಾಹನ ನಾಡಿನಲ್ಲಿ ಸಾಕಷ್ಟು ಪ್ರಚಾರವಾಗಿದ್ದವು. ವರ್ಣಾಶ್ರಮ ವ್ಯವಸ್ಥೆ ವೈದಿಕರಲ್ಲಿ ಆಚರಣೆಯಲ್ಲಿದ್ದಿತು.

ಇದೇ ರೀತಿಯಲ್ಲಿ ಜೈನಮತ ದಖಿನ್ ಪ್ರಸ್ಥಭೂಮಿಯಲ್ಲಿ ಪ್ರಸಾರವಾಗಿದ್ದಿತು. ಮಾಳವ ಮತ್ತು ಕಳಿಂಗ ರಾಜ್ಯಗಳಲ್ಲಿ ಜೈನಧರ್ಮಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಉದಯಗಿರಿ ಬೆಟ್ಟಗಳಲ್ಲಿ ಅನೇಕ ಜೈನ ಗುಹಾಲಯಗಳಿದ್ದವು.

ಬೌದ್ಧಮತ ದಖಿನ್ ಭೂಭಾಗದಲ್ಲಿ ಕ್ರಿ.ಪೂ. 3ನೇ ಶತಮಾನದ ವೇಳೆಗೆ ಪ್ರಸಾರವಾಗಿದ್ದಿತು. ಬೌದ್ಧ ಗ್ರಂಥಗಳ ಪ್ರಕಾರ ಅಶೋಕ ಕಳುಹಿಸಿದ ಬೌದ್ಧ ಭಿಕ್ಷುಗಳು ಮಹಿಷಮಂಡಲ ಮತ್ತು ಮಹಾರಾಷ್ಟ್ರ ಪ್ರದೇಶಗಳಲ್ಲಿ ಮತ ಪ್ರಚಾರ ಮಾಡಿದರು. ಶಾತವಾಹನ ಕಾಲದಲ್ಲಿ ಬೌದ್ಧಮತ ದಖಿನ್ ಭೂಪ್ರದೇಶದಲ್ಲಿ ಅತ್ಯಂತ ಉತ್ತಮ ಸ್ಥಿತಿಯಲ್ಲಿದ್ದಿತು. ಶಾತವಾಹನ ರಾಜರು ವೈದಿಕ ಮತೀಯರಾದರೂ ಬೌದ್ಧಮತಕ್ಕೆ ವಿಶೇಷ ಮನ್ನಣೆ ಮತ್ತು ಪ್ರೋತ್ಸಾಹ ನೀಡಿದ್ದರು. ನಾಸಿಕದ ಬಳಿ ವಾಸಿಸುತ್ತಿದ್ದ ಬೌದ್ಧ ಭಿಕ್ಷುಗಳು ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕಾಗಿ ಶಾತವಾಹನ ರಾಜನಾದ ಕೃಷ್ಣ, ಮಹಾಮಾತ್ರ ಎಂಬ ಅಧಿಕಾರಿಯನ್ನು ನೇಮಿಸಿದನು. ಬೌದ್ಧ ಭಿಕ್ಷು ಭಿಕ್ಷುಣಿಯರು ಹೆಚ್ಚು ಸಂಖ್ಯೆಯಲ್ಲಿ ಶಾತವಾಹನರ ಸಾಮ್ರಾಜ್ಯದ ಎಲ್ಲಾ ಭಾಗಗಳಲ್ಲೂ ವಾಸವಾಗಿದ್ದರು. ಅವರ ಅನುಕೂಲಕ್ಕಾಗಿ ಚೈತನ್ಯಗಳನ್ನೂ, ವಿಹಾರಗಳನ್ನೂ ಕಟ್ಟಿಸಿದರು. ಗೌತಮೀ ಬಾಲಶ್ರೀಯು ಬೌದ್ಧ ಯತಿಗಳಿಗಾಗಿ ಒಂದು ಗುಹಾಲಯ ಮಾಡಿಸಿಕೊಟ್ಟಳು. ಎರಡನೇ ಪುಲಮಾಯಿ ಕಾರ್ಲೆ ಬಳಿಯಲ್ಲಿ ವಾಸಿಸುತ್ತಿದ್ದ ಭಿಕ್ಷುಗಳ ಉಪಚಾರಕ್ಕಾಗಿ ಒಂದು ಗ್ರಾಮದಾನ ಮಾಡಿಕೊಟ್ಟನು. ಶಾತವಾಹನ ಸಾಮ್ರಾಜ್ಯದ ನಾಸಿಕ್, ಕಾರ್ಲೆ, ಕನ್ಹೇರಿ, ಜುನ್ನರ್, ಅಮರಾವತಿ, ನಾಗರ್ಜುನಕೊಂಡ, ಜಗ್ಗಯ್ಯಪೇಟ ಮೊದಲಾದ ಕಡೆಗಳಲ್ಲಿ ಆ ಕಾಲದಲ್ಲಿ ನಿರ್ಮಾಣವಾದ ಬೌದ್ಧ ಸ್ತೂಪಗಳು, ವಿಹಾರಗಳು ಮತ್ತು ಗುಹಾಲಯಗಳು ಇವರ ಕಾಲದಲ್ಲಿ ಬೌದ್ಧ ಮತದ ಪ್ರಗತಿಯನ್ನು ಅರಿಯಲು ಸಹಕಾರಿಯಾಗಿದೆ.

### 5.6.3 *ಕಲೆ*

ಶಾತವಾಹನರು ಕಲೆಗೆ ವಿಶೇಷ ಪ್ರೋತ್ಸಾಹ ಕೊಟ್ಟರು. ಅವರ ಕಾಲದಲ್ಲಿ ಅನೇಕ ಗುಹಾಲಯಗಳು ಮತ್ತು ಚೈತ್ಯಾಲಯಗಳೂ ನಿರ್ಮಾಣವಾದವು. ಜಗತ್ ಪ್ರಸಿದ್ಧ ಅಜಂತ ಚಿತ್ರಕಲಾ ಶೈಲಿ ಶಾತವಾಹನರ ಕಾಲದಲ್ಲಿ ಉಗಮವಾಗಿ ಕ್ರಮೇಣ ಉನ್ನತ ಸ್ಥಿತಿಗೆ ಬಂದಿತು. ಇವರ ತರುವಾಯ ಆಳಿದ ಎಲ್ಲಾ ರಾಜಮನೆತನಗಳೂ ಶಾತವಾಹನ ಶೈಲಿಯ ಪರಂಪರೆಯನ್ನು ಬೆಳಸಿಕೊಂಡು ಬಂದರು. ಜಗ್ಗಯ್ಯಪೇಟ, ಅಮರಾತಿ, ನಾಗರ್ಜುನಕೊಂಡ, ಅಲ್ಲೂರು ಮತ್ತು ಗುಮ್ಮಡಿದಿರ್ರು ಮೊದಲಾದ ಸ್ಥಳಗಳಲ್ಲಿನ ಶಿಲ್ಪ ಕೃತಿಗಳು ಶಾತವಾಹನರ ಕಾಲದಲ್ಲಿ ಕಲೆ ಸಾಕಷ್ಟು ವಿಕಾಸಗೊಂಡು ಉಚ್ಛ್ರಾಯ ಸ್ಥಿತಿಗೆ ಬಂದಿತ್ತೆಂಬುದನ್ನು ಮನವರಿಕೆ ಮಾಡಿಕೊಡುತ್ತದೆ. ಶಾತವಾಹನ ಕಲೆ ವಿದೇಶಿ ಕಲೆ ಪ್ರಭಾವದಿಂದ ಹೊರತಾಗಿದ್ದಿತೆಂದು ತಿಳಿದು ಬರುತ್ತದೆ. ಅಮರಾವತಿಯ ಚಿತ್ರಕಲೆ ಹಾಗೂ ಶಿಲ್ಪಕಲೆಗಳು, ಸಂಗೀತ, ನೃತ್ಯ ಉತ್ತಮ ಉದಾಹರಣೆಗಳಾಗಿವೆ. ಬುದ್ಧದೇವನ ಪಾದಕಮಲಗಳತ್ತ ಮಣಿಯುತ್ತಿರುವ ನಾಲ್ಕು ಜನ ಮಹಿಳೆಯರ ಹಾಗೂ ಸ್ತ್ರೀಪುರುಷರು ಸ್ತೂಪಾಲಂಕಾದಲ್ಲಿ ಮಗ್ನರಾಗಿರುವ ದೃಶ್ಯಗಳನ್ನು ಕಾಣಬಹುದು. ಕರ್ನಾಟಕದಲ್ಲಿ ಇವರ ಕಾಲದ ಕಲೆಯ ಅವಶೇಷಗಳು ಬನವಾಸಿ, ಸನ್ನತಿ, ಐಹೊಳೆ ಸ್ಥಳಗಳಲ್ಲಿ ದೊರೆತಿವೆ.

ಶಾತವಾಹನ ಸಾಮ್ರಾಜ್ಯದ ರಾಜಧಾನಿಯಾದ ಪ್ರತಿಷ್ಠಾನವು ಕಲೆ, ಸಂಸ್ಕೃತಿಗಳ ಕೇಂದ್ರವಾಗಿದ್ದಿತು. ಶಾತವಾಹನರು ಆಡಳಿತ, ಸಾಹಿತ್ಯ ಮತ್ತು ಕಲೆಗೆ ವಿಶೇಷ ಪ್ರೋತ್ಸಾಹ ನೀಡುವುದರ ಮೂಲಕ ಭಾರತೀಯ ಸಂಸ್ಕೃತಿಗೆ ಅಮೋಘ ಸೇವೆ ಸಲ್ಲಿಸಿದ್ದಾರೆ. ಇವರ ತರುವಾಯ ಇವರ ಆಡಳಿತ ಪದ್ಧತಿಯನ್ನು ಸಾಮಾನ್ಯವಾಗಿ ದಕ್ಷಿಣ ಭಾರತದ ಎಲ್ಲಾ ರಾಜ ಮನೆತನಗಳೂ ಅಲ್ಪಸ್ವಲ್ಪ ಮಾರ್ಪಾಡುಗಳೊಂದಿಗೆ ಅಳವಡಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಶಾತವಾಹನನ ತರುವಾಯ ಆಳ್ವಿಕೆ ನಡೆಸಿದ ಕದಂಬರೂ, ಗಂಗರೂ, ಚಾಲುಕ್ಯರೂ ಶಾತವಾಹನರ ಆಡಳಿತ ಯಂತ್ರವನ್ನು ಹಲವು ಮಾರ್ಪಾಟುಗಳೊಂದಿಗೆ ಮುಂದುವರಿಸಿದರು. ಬೌದ್ಧ ಗುಹಾಂತರ್ದೇವಾಲಯವನ್ನನುಸರಿಸಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಗುಹಾಲಯಗಳು ಮತ್ತು

ಗುಡಿಗಳು ನಿರ್ಮಾಣವಾದವು. ಇಂತಹುದೇ ಮಾದರಿಯ ನಿರ್ಮಾಣವು ಪಲ್ಲವರ ಕಾಲದಲ್ಲಿ ಮಹಾಬಲೀಪುರಂ ಮೊದಲಾದ ಸ್ಥಳಗಳಲ್ಲಿ ಆಚಾರಣೆಗೆ ಬಂದಿತು. ಇವರ ಕೊಡುಗೆಗಳು ದಕ್ಷಿಣ ಭಾರತದ ಇತಿಹಾಸದಲ್ಲಿ ಅಮರವಾಗಿ ಉಳಿದುಕೊಂಡಿವೆ. ದಕ್ಷಿಣ ಭಾರತದ ಸಂಸ್ಕೃತಿಯ ಆರಂಭದ ಉದ್ಘಟಕರಾಗಿ ಪ್ರಸಿದ್ಧರಾಗಿದ್ದಾರೆ ಎನ್ನಬಹುದು.

## 5.7 ಸಾರಾಂಶ

ಈ ಘಟಕ ಎರಡು ಅಧ್ಯಾಯ ವಿಷಯಗಳನ್ನೊಳಗೊಂಡಿದೆ. ಮೊದಲನೆಯದು ದಕ್ಷಿಣ ಭಾರತದಲ್ಲಿ ಮೌರ್ಯರ ಆಳ್ವಿಕೆಗೆ ಸಂಬಂಧಪಟ್ಟ ವಿಷಯ ಕುರಿತಂತೆ ಪರಿಚಯಿಸಿ ಕೊಡಲಾಗಿದೆ. ಇವರಿಗಿಂತ ಪೂರ್ವದಲ್ಲಿ ಉತ್ತರಭಾರತದ ನಂದರು ದಖಿನ್ ಪ್ರಸ್ಥಭೂಮಿಯ ಮೇಲೆ ತಮ್ಮ ಅಧಿಕಾರ ಸ್ಥಾಪಿಸಿದ್ದು, ಅವರ ತರುವಾಯ ಅಧಿಕಾರಕ್ಕೆ ಮುಂದುವರಿದ ಬಗೆಗೆ ಇರುವ ಮಾಹಿತಿಗಳನ್ನು ನೀವು ಗಮನಿಸಿದ್ದೀರಿ. ಜೈನಮನಿ ಬದ್ರಬಾಹುವಿನೊಡನೆ ಚಂದ್ರಗುಪ್ತ ಮೌರ್ಯನು ದಕ್ಷಿಣದಿಂದ ಆಗಮಿಸಿ, ಕರ್ನಾಟಕದ ಶ್ರವಣ ಬೆಳಗೊಳದಲ್ಲಿ ಸಲ್ಲೇಖನ ವ್ರತ ಕೈಗೊಂಡ ಬಗೆ ಜೈನ ಸಾಹಿತ್ಯ ಪರಂಪರೆ ಮತ್ತು ಶಾಸನಗಳು ದೃಢಪಡಿಸಿರುವ ವಿಷಯವನ್ನು ನಿಮ್ಮ ಗಮನಕ್ಕೆ ತಂದು ಅರಿವು ಮೂಡಿಸಲು ಯತ್ನಿಸಲಾಗಿದೆ. ನಂತರ, ಅಶೋಕನ ಶಾಸನ ಪುರಾವೆಗಳು ಸ್ಪಷ್ಟ ಹಾಗೂ ನಿಕರವಾದ ಮಾಹಿತಿಯನ್ನು ಮೌರ್ಯರ ಆಳ್ವಿಕೆ ಬಗ್ಗೆ ನೀಡಿರುವ ವಿಷಯವನ್ನು ನೀವು ಪರಿಚಯಿಸಿಕೊಂಡಿದ್ದೀರಿ. ಮೌರ್ಯರ ಆಳ್ವಿಕೆಯಿಂದ ಉತ್ತರದಿಂದ ರಾಜಕೀಯ, ಆಡಳಿತ ಪದ್ಧತಿ, ವೈದಿಕ ಜೈನ, ಬೌದ್ಧ ಧಾರ್ಮಿಕ ಪರಂಪರೆ ಹಾಗೂ ಸಾಮಾಜಿಕ ಸಾಂಸ್ಕೃತಿಕ ವಿಷಯಗಳು ದಖಿನಿನ್ನಲ್ಲಿ ಬೇರು ಬಿಡಲು ಸಹಾಯವಾಯಿತು ಎಂಬ ವಿಷಯವನ್ನು ಮನದಟ್ಟು ಮಾಡಲು ಯತ್ನಿಸಿದ್ದೇವೆ.

ಎರಡನೆಯದಾಗಿ ಮೌರ್ಯರ ಉತ್ತರಾಧಿಕಾರಿಗಳಾಗಿ ಶಾತವಾಹನರು ದಖಿನ್ನಿನ್ನಲ್ಲಿ ಸ್ವತಂತ್ರ್ಯ ರಾಜ್ಯ ಸ್ಥಾಪನೆಯನ್ನು ಕುರಿತು ತಿಳಿಸಲು ಯತ್ನ ಮಾಡಿದ್ದೇವೆ. ಶಾತವಾಹನ ರಾಜಕೀಯ ಹಿನ್ನೆಲೆ, ಅವರಲ್ಲಿ ಕಂಡು ಬರುವ ಪ್ರಮುಖ ರಾಜರ ಸಾಧನೆಯ ಪರಿಚಯ ಮಾಡಿ ಕೊಡಲಾಗಿದೆ. ಇವರು ದಖಿನ್ನ್ ಪ್ರಸ್ಥಭೂಮಿಯಲ್ಲಿ ಸುಮಾರು 4 ನೂರು ವರ್ಷಗಳ ಕಾಲ ರಾಜ್ಯವಾಳಿದರು. ಇವರು ವೈದಿಕ, ಜೈನ ಮತ್ತು ಬೌದ್ಧ ಮತಗಳಿಗೆ ಉದಾರ ಪ್ರೋತ್ಸಾಹ ನೀಡಿ ವಿಷಯವನ್ನು ನಿಮ್ಮ ಗಮನಕ್ಕೆ ತರಲು ಯತ್ನಮಾಡಲಾಗಿದೆ.

ಶಾತವಾಹನರ ಕಾಲದಲ್ಲಿ ಆಚರಣೆಯಲ್ಲಿದ್ದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಕಲೆಯ ವಿಷಯಗಳನ್ನು ಕುರಿತಂತೆ ವಿವರಣೆ ನೀಡಿ ನಿಮ್ಮ ಗಮನವನ್ನು ಸೆಳೆಯಲಾಗಿದೆ. ದಖಿನ್ ಮತ್ತು ಉತ್ತರ ಭಾರತದ ಸಂಸ್ಕೃತಿಗಳನ್ನು ಸಾಮಾವ್ಯಗಳಿಸಿ ಶ್ರೇಷ್ಠಮಟ್ಟದ ಭಾರತೀಯ ನಾಗರೀಕತೆಯ ಉದಯಕ್ಕೆ ಕಾರಣರಾಗಿದ್ದಾರೆ. ಇವರು ಅನುಷ್ಠಾನಕ್ಕೆ ತಂದ ಅನೇಕ ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ವಿಚಾರಗಳನ್ನು ಇವರ ತರುವಾಯ ರಾಜ್ಯವಾಳಿದ ದಕ್ಷಿಣಭಾರತ ರಾಜಮನೆತನಗಳು ಪಾಲಿಸಿಕೊಂಡು ಮುಂದುವರಿಸಿದ ವಿಷಯವನ್ನು ನಿಮಗೆ ಮನದಟ್ಟು ಮಾಡಲಾಗಿದೆ.

## 5.8 ಸ್ವಪರೀಕ್ಷೆ ಪ್ರಶ್ನೆಗಳು

1) ದಖಿನ್ನಿನ ಮೇಲೆ ಮೌರ್ಯರ ಆಳ್ವಿಕೆಗೆ ಪ್ರಭಾವವನ್ನು ತಿಳಿಸಿ

2) ಶಾತವಾಹನ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ವಿವರಿಸಿ

3) ದಖಿನ್ ಸಂಸ್ಕೃತಿಯ ಬೆಳವಣಿಗೆಗೆ ಶಾತವಾಹನ ಕೊಡುಗೆಗಳನ್ನು ವಿವರಿಸಿ

ಟಿಪ್ಪಣಿ ಬರೆಯಿರಿ

1) ದಖನ್ನಿನಲ್ಲಿ ದೊರಕಿರುವ ಅಶೋಕನ ಶಾಸನಗಳು

2) ಶಾತವಾಹನ ಕಾಲದಲ್ಲಿ ವೈದಿಕ ಧರ್ಮ

3) ಶಾತವಾಹನರ ಕಾಲದಲ್ಲಿ ಬೌದ್ಧದರ್ಮದ ಪ್ರಗತಿ

4) ಶಾತವಾಹನರ ಕಾಲದಲ್ಲಿ ಕಲಾ ಬೆಳವಣಿಗೆ

## 5.9 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1) K.K. ಪಿಳ್ಳೈ : ದಕ್ಷಿಣ ಭಾರತ ಇತಿಹಾಸ

2) ಎಂ.ವಿ. ಕೃಷ್ಣರಾವ್ : ಕರ್ನಾಟಕ ಇತಿಹಾಸ ದರ್ಶನ

3) ಎನ್. ಲಕ್ಷ್ಮಿನಾರಾಯಣರಾವ್ ಮತ್ತು ಆರ್.ಎಸ್. ಪಂಚಮುಖಿ : ಕರ್ನಾಟಕದ ಅರಸು ಮನೆತನಗಳು

4) R.C. Majumdar(Ed) : The Age of Imperial Unity

5) G. Yazdani(Ed) : The Early History of Deccan

6) R.G. Bhandarkar : Early History of the Deccan

7) Romila thappar : Ashoka and delcline of the Mauryas

8) K. Gopalachari : Early History of Andhra

9) R.R. Diwakar(Ed) : Karnataka through the Ages\par

10) C. Hayavadana Rao (Ed) : Mysore Gazetteer Vol II, Part 2

11) G.R. Ranga swamaiah : ಪ್ರಾಚೀನ ಭಾರತ

12) T.V. Mahalingam : South Indian History

13) M.G.S. Narayanan : Re-Interpretation of South Indian History.

14) ಅ. ಸುಂದರ್ (ಸಂ) : ಕರ್ನಾಟಕ ಚರಿತ್ರೆ ಸಂ.1, ಕ.ವಿ. ಹಂಪಿ


ಪ್ರೊ || ಮಾದೇಗೌಡ

# ಟಿಪ್ಪಣಿಗಳು

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

................................................................................................................

..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................
..........................................................................................................................

# ಬ್ಲಾಕ್ -II

## ಘಟಕ - 6

## ಕದಂಬರು : ರಾಜಕೀಯ ಇತಿಹಾಸ ಮತ್ತು ಸಂಸ್ಕೃತಿ

ವಿಷಯ ಕ್ರಮ


**6.0** ಘಟಕದ ಉದ್ದೇಶ

**6.1** ಪೀಠಿಕೆ

**6.2** ಹಿನ್ನಲೆ

**6.3** ರಾಜಕೀಯ ಇತಿಹಾಸ

**6.4** ಆಡಳಿತ ವ್ಯವಸ್ಥೆ

**6.5** ಕದಂಬರ ಕಾಲದಲ್ಲಿ ಸಂಸ್ಕೃತಿ

**6.6** ಸಾರಾಂಶ

**6.7** ಸ್ವಪರೀಕ್ಷೆ ಪ್ರಶ್ನೆಗಳು

**6.8** ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 6.0 ಘಟಕದ ಉದ್ದೇಶ

ಕದಂಬರ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಸಿಕೊಡುವುದು ಈ ಘಟಕದ ಉದ್ದೇಶವಾಗಿದೆ. ಈ ಘಟಕವನ್ನು ಓದಿ ಗ್ರಹಿಸಿದ ಮೇಲೆ ಈ ಕೆಳಗೆ ತಿಳಿಸಿರುವ ವಿಷಯವನ್ನು ನೀವು ಕಲಿಯುವಿರಿ

* ದಕ್ಷಿಣ ಕರ್ನಾಟಕದಲ್ಲಿ ಶಾತವಾಹನರ ಅವನತಿಯ ತರುವಾಯ ಸ್ವತಂತ್ರವಾಗಿ ರಾಜ್ಯ ಕಟ್ಟಿದ ಪ್ರಥಮರೆಂದು ಪ್ರಸಿದ್ಧರಾಗಿದ್ದಾರೆ.
* ಇವರ ಮೂಲದ ಬಗ್ಗೆ ಇರುವ ಜಿಜ್ಞಾಸೆಗಳನ್ನು ಅರಿವಿರಿ
* ರಾಜಕೀಯ ಇತಿಹಾಸದಲ್ಲಿ ಪ್ರಮುಖ ಕದಂಬ ಅರಸರ ಸಾಧನೆಯನ್ನು ತಿಳಿವಿರಿ
* ಇವರ ಕಾಲದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಧಾರ್ಮಿಕ , ಆಡಳಿತ , ಕಲಾ ವಿಷಯಗಳನ್ನು ಕಲಿಯಲು ಸಮರ್ಥರಾಗುತ್ತೀರಿ.

## 6.1 ಪೀಠಿಕೆ

ಕ್ರಿ.ಶ. 3ನೇ ಶತಮಾನದ ಪೂರ್ವಾರ್ಧದಲ್ಲಿ ಶಾತವಾಹನರ ಸಾಮ್ರಾಜ್ಯವು ಕೊನೆಗೊಂಡಿತು. ಅನಂತರ ಸುಮಾರು ಒಂದು ನೂರು ವರ್ಷಗಳ ಕಾಲದ ಕರ್ನಾಟಕದ ಇತಿಹಾಸವು ಅಸ್ಪಷ್ಟ. ಶಾತವಾಹನರ ಸಮಕಾಲೀನರಾಗಿಯೋ ಅಥವಾ ಅವರ ಮಾಂಡಲಿಕರಾಗಿಯೊ ಕನ್ನಡ ನಾಡಿನಲ್ಲಿ ಹಲವು ಸಣ್ಣ ಪುಟ್ಟ ರಾಜರಿದ್ದರೆಂದು ತಿಳಿದು ಬರುತ್ತದೆ. ಬನವಾಸಿ ಪ್ರದೇಶ (ಇಂದಿನ ಶಿವಮೊಗ್ಗ ಜಿಲ್ಲೆ)ದಲ್ಲಿ ಚುಟುವಂಶ, ಸೇಂದ್ರಕರು ಪ್ರಮುಖರಾಗಿದ್ದ ಕದಂಬವಂಶ ಸ್ಥಾಪನೆಯಾದ ಮೇಲೆ ಅವರ ಪ್ರಾಬಲ್ಯ ಕ್ಷೀಣಿಸಿತು. ಇವರ ಪ್ರಬಲ ರಾಜಕೀಯ ಪ್ರತಿಸ್ಪರ್ಧಿಯಾದ ದಕ್ಷಿಣದ ಪಲ್ಲವರು ಶಾತವಾಹನರ ತರುವಾಯ ತಮಿಳು ಪ್ರದೇಶದ ಮೇಲೆ ಅಧಿಕಾರ ಸ್ಥಾಪಿಸಿದ ಪಲ್ಲವರು ಕನ್ನಡ ನಾಡಿನ ದಕ್ಷಿಣ ಭಾಗದ ಮೇಲೂ ತಮ್ಮ ಅಧಿಕಾರ ಸ್ಥಾಪಿಸಿದ್ದ ವಿಷಯ ತಿಳಿದುಬರುತ್ತದೆ. ಇವರನ್ನು ಸೋಲಿಸಿದ ಕದಂಬರು ಸ್ವತಂತ್ರ ರಾಜ್ಯ ನಿರ್ಮಿಸಿದ ವಿಷಯ ಗಮನಾರ್ಹವಾದ ಐತಿಹಾಸಿಕ ಸಂಗತಿಯನ್ನು ನಿಮಗೆ ಈ ಘಟಕದಲ್ಲಿ ಪರಿಚಯಿಸಿಕೊಡಲಾಗಿದೆ.

ಕದಂಬ ಅರಸರ ರಾಜಕೀಯ ಹಾಗೂ ಸಾಂಸ್ಕೃತಿಕ ಸಾಧನೆಗಳು ಅನಂತರ ಆಳಿದ ಕನ್ನಡ ರಾಜರುಗಳಿಗೆ ಅನೇಕ ವಿಷಯಗಳಲ್ಲಿ ಮಾದರಿಯಾಗಿ ಪರಿಣಮಿಸಿದವು. ಇವರ ಸಾಂಸ್ಕೃತಿಕ ಪರಂಪರೆ ಶಾತವಾಹನ ಮಾದರಿಯನ್ನು ಹೋಲುತ್ತದೆ. ವೈದಿಕ, ಜೈನ, ಬೌದ್ಧ ಪರಂಪರೆಗಳನ್ನು ಮುಂದುವರಿಸಿ ಮುಂದಿನವರಿಗೆ ಸ್ಫೂರ್ತಿ ನೀಡಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂಬ ವಿಷಯ ಮನನೀಯವಾದುದು.

## 6.2 ಹಿನ್ನಲೆ

ಶಾತವಾಹನರ ಸಾಮ್ರಾಜ್ಯ ಒಡೆದುಹೋದ ನಂತರ ದಕ್ಷಿಣ ಭಾರತದಲ್ಲಿ ಅನೇಕ ರಾಜ್ಯಗಳು ಸ್ಥಾಪನೆಯಾದವು. ತಮಿಳುನಾಡಿನಲ್ಲಿ ಪಲ್ಲವರು, ಕನ್ನಡ ನಾಡಿನಲ್ಲಿ ಬನವಾಸಿ ಕದಂಬರು, ತಲಕಾಡಿನ ಗಂಗರು ರಾಜ್ಯ ಸ್ಥಾಪಿಸಿದರು. ಕದಂಬ ಮನೆತನ ಕ್ರಿ.ಶ. ಸುಮಾರು ನಾಲ್ಕನೆಯ ಶತಮಾನದ ಮಧ್ಯದ ವೇಳೆಗೆ ಅಸ್ತಿತ್ವಕ್ಕೆ ಬಂದಿತು. ಸುಮಾರು 150 ವರ್ಷಗಳ ಕಾಲ ಈ ಮನೆತನ ಅಧಿಕಾರ ನಡೆಸಿತು. ಅವರ ರಾಜ್ಯ ಶಿವಮೊಗ್ಗ, ಧಾರವಾಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಹಲವು ಭಾಗಗಳನ್ನೊಳಗಂಡಿತು. ಬನವಾಸಿ ಅವರ ರಾಜಧಾನಿಯಾಗಿದ್ದುದರಿಂದ ಈ ಮನೆತನಕ್ಕೆ ಬನವಾಸಿಯ ಕದಂಬರೆಂದೇ ಹೆಸರಾಗಿದೆ. ಬನವಾಸಿ ಪ್ರಾಚೀನ ಕಾಲದಿಂದಲೂ ಪ್ರಸಿದ್ಧ

ಸ್ಥಳವಾಗಿದ್ದಿತು. ಮಹಾ ಭಾರತದಲ್ಲಿ ಬನವಾಸಿ (ವನವಾಸಿ) ಉಲ್ಲೇಖನವಿದೆ. ಬನವಾಸಿಗೆ ವೈಜಯಂತಿ (ಪುರ) ಎಂಬ ಹೆಸರು ಇದ್ದಿತು. ಬೌದ್ಧ ಗ್ರಂಥಗಳ ಪ್ರಕಾರ ಧರ್ಮಾಶೋಕ ಚಕ್ರವರ್ತಿ ಬನವಾಸಿಗೆ ಬೌದ್ಧ ಭಿಕ್ಷುಗಳನ್ನು ಮತ ಪ್ರಚಾರಕ್ಕಾಗಿ ಕಳುಹಿಸಿಕೊಟ್ಟಿದ್ದನು. ನಾಗಾರ್ಜುನಕೊಂಡದಲ್ಲಿ ದೊರೆತಿರುವ ಪ್ರಾಕೃತ ಶಾಸನಗಳಲ್ಲಿ ಬನವಾಸಿಯ ನಿವಾಸಿಗಳು ಯಾತ್ರಾರ್ಥಿಗಳಾಗಿ ಇಕ್ಷ್ವಾಕು ರಾಜ್ಯದಲ್ಲಿದ್ದ ಅನೇಕ ಬೌದ್ಧಾಲಯಗಳನ್ನು ಸಂದರ್ಶಿಸುತ್ತಿದ್ದರೆಂದು ವಿವರಿಸಿದೆ. ಟಾಲಮಿ ತನ್ನ ಗ್ರಂಥದಲ್ಲಿ ಬನವಾಸಿಯ ಹೆಸರನ್ನು ಸೇರಿಸಿರುವನು. ಪ್ರಾಚೀನ ಕಾಲದಿಂದ ಪ್ರಸಿದ್ಧವಾಗಿದ್ದ ಬನವಾಸಿಯನ್ನು ಕದಂಬ ರಾಜ್ಯ ಸ್ಥಾಪಕರು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಕದಂಬರ ಇತಿಹಾಸ ಅರಿಯಲು ಶಾಸನಗಳೇ ಮುಖ್ಯ ಆಧಾರ. ಸಾಹಿತ್ಯ ಮತ್ತು ಇತರ ಆಕರಗಳು ಕದಂಬರ ಚರಿತ್ರೆಗೆ ಹೆಚ್ಚು ಸಹಕಾರಿಯಾಗಿಲ್ಲ.

ಕದಂಬರ ಮೂಲಕ್ಕೆ ಸಂಬಂಧಿಸಿದಂತೆ ವಾದ ವಿವಾದಗಳಿವೆ. ಮೂಲ ಕದಂಬ ಮನೆತನ ಅವನತಿ ಹೊಂದಿದ ಶತಮಾನದ ತರುವಾಯ 11 ಮತ್ತು 12 ನೇ ಶತಮಾನಗಳಲ್ಲಿ ಕಲ್ಯಾಣ ಚಾಲುಕ್ಯರ ಸಾಮಂತ ಮನೆತನಗಳಾಗಿ ಆಳ್ವಿಕೆ ನಡೆಸಿದ ಹಾನಗಲ್ ಮತ್ತು ಇತರ ಕದಂಬ ಶಾಖೆಗಳ ಶಾಸನದಲ್ಲಿ ಕದಂಬರ ಮೂಲಕ್ಕೆ ಸಂಬಂಧಿಸಿದಂತೆ ಪೌರಾಣಿಕ ವರ್ಣನೆಗಳು ಕಂಡು ಬರುತ್ತವೆ. ಶಾಸನಗಳಲ್ಲೂ ವಿಭಿನ್ನ ವರ್ಣನೆಗಳಿವೆ. ಒಂದು ವರ್ಣನೆ ಪ್ರಕಾರ ತ್ರಿಲೋಚನ ಕದಂಬ ಎಂಬುವವನು ಈ ಸಂತತಿಯ ಮೂಲಪುರುಷ. ಇವನಿಗೆ ಮೂರುಕಣ್ಣುಗಳಿದ್ದವು ಮತ್ತು ಇವನು ಕದಂಬ ವೃಕ್ಷದಡಿಯಲ್ಲಿ ಬಿದ್ದ ಶಿವನ ಬೆವರಿನಿಂದ ಉತ್ಪತ್ತಿಯಾದನು. ಆದ್ದರಿಂದ ಕದಂಬ ಎಂಬ ಹೆಸರಾಯಿತು. ಕದಂಬರ ಮೂಲವನ್ನು ನಿರ್ಣಯಿಸಲು ಇಂತಹ ದಂತ ಕಥೆಗಳಿಂದ ಉಪಯೋಗವಾಗುವುದಿಲ್ಲ.

ಬನವಾಸಿ ಕದಂಬರ ಆರನೇ ರಾಜನೂ ಕಾಕುಸ್ಥವರ್ಮನ ಮೊಮ್ಮಗನೂ ಆದ ಶಾಂತಿವರ್ಮನು ತಾಳಗುಂದದಲ್ಲಿ ಸ್ಥಾಪಿಸಿದ ಶಾಸನದ ಪ್ರಕಾರ ಕದಂಬರ ರಾಜ್ಯ ಸ್ಥಾಪಕನಾದ ಮಯೂರನು ಬ್ರಾಹ್ಮಣನಾಗಿದ್ದನು. ಇವನು ಹೆಚ್ಚಿನ ಅಧ್ಯಯನಕ್ಕಾಗಿ ಕಂಚಿಗೆ ಹೋದನು. ಅಲ್ಲಿ ಆಗ ಪಲ್ಲವರು ನೆರವೇರಿಸಿದ ಯಾಗದ ಸಂದರ್ಭದಲ್ಲಿ ಅವರ ಸೇವಕರಿಂದ ಅಪಮಾನವುಂಟಾಗಿ ಕುಪಿತನಾದ ಮಯೂರ ಶರ್ಮನು ತ್ರಿಪರ್ವತದ ಬಳಿಗೆ ಬಂದು ಸೈನ್ಯವನ್ನು ಕಟ್ಟಿ ಪಲ್ಲವರ ಸೈನ್ಯವನ್ನು ಪರಾಜಿತಗೊಳಿಸಿದನೆಂದೂ, ಆದ್ದರಿಂದ ಪಲ್ಲವರು ಬನವಾಸಿ ಮತ್ತು ಸುತ್ತಮುತ್ತಿನ ಪ್ರದೇಶವನ್ನು ಅವನಿಗೆ ಬಿಟ್ಟು ಕೊಟ್ಟು ಇವನನ್ನು ರಾಜನೆಂದು ಒಪ್ಪಿದರೆಂದೂ ತಿಳಿದು ಬರುತ್ತದೆ. ಈ ಘಟನೆಯಿಂದ ಬ್ರಾಹ್ಮಣನಾದ ಮಯೂರ ಶರ್ಮನು ಮಯೂರವರ್ಮ ಎಂಬ ಕ್ಷತ್ರಿಯನಾಮವನ್ನು ಪಡೆದನೆಂದು ತಾಳಗುಂದ ಶಾಸನದಲ್ಲಿ ಹೇಳಲಾಗಿದೆ. ಆದರೆ ಈ ಶಾಸನವು ಕೂಡ ಕದಂಬ ವಂಶದ ಪ್ರಾರಂಭದ ರಾಜರ ಕಾಲದಲ್ಲಿ ಬರೆಸಿದುದಲ್ಲ ಆದುದರಿಂದ ಇದು ನಂಬಲರ್ಹವಲ್ಲ ಎಂದು ಅಭಿಪ್ರಾಯ ಪಡಲಾಗಿದೆ.

ತಮಿಳು ಗ್ರಂಥದಲ್ಲಿ ದೊರೆಯುವ ಮಾಹಿತಿಯ ಪ್ರಕಾರ ಕದಂಬರು ದಕ್ಷಿಣ ಭಾರತದ ಕುರಂಬ ಎಂಬ ಪಂಗಡಕ್ಕೆ ಸೇರಿದವರಾಗಿರಬೇಕೆಂದು ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಾಚೀನ ಕಾಲದ ತಮಿಳು ರಾಜನೊಬ್ಬನು ಸಮುದ್ರ ತೀರದಲ್ಲಿ ದರೋಡೆಯಲ್ಲಿ ತೊಡಗಿದ್ದ ಈ ಪಂಗಡದ ಹಲವರನ್ನು ಶಿಕ್ಷಿಸಿ ಅವರಿಗೆ ಪವಿತ್ರವೆನಿಸಿದ್ದ ಕದಂವೃಕ್ಷವನ್ನು ಕಡಿದು ಹಾಕಿಸಿ ಅದರಿಂದ ರಣಭೇರಿಯನ್ನು ಮಾಡಿಸಿದನೆಂದು ಪ್ರಾಚೀನ ತಮಿಳು ಗ್ರಂಥಗಳಿಂದ ತಿಳಿದು ಬರುತ್ತದೆ. ಮತ್ತೊಂದು ಹೇಳಿಕೆಯ ಪ್ರಕಾರ ಕದಂಬರು ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿದ್ದ ಕುರುಂಬ ಎಂಬ ಪಂಗಡಕ್ಕೆ ಸೇರಿದವರೆಂದೂ ಹಾಗೂ ಅವರು ಕದಂಬ ವೃಕ್ಷದಿಂದ ಮಧ್ಯವನ್ನು ತೆಗೆಯುವ ವೃತ್ತಿಯವರೆಂದೂ ತಿಳಿದು ಬರುತ್ತದೆ. ಇವರು ಶಿವ ಮತ್ತು ಮುರುಗನ್ ದೇವತೆಯ ಉಪಾಸಕರಾಗಿದ್ದರೆಂದೂ,

ಆದುದರಿಂದಲೇ ಮುರುಗನ್ನ್‌ನ ವಾಸಸ್ಥಾನವಾದ ಕದಂಬ ವೃಕ್ಷವೂ ಆದೇವತೆಯ ವಾಹನವಾದ ಮಯೂರವೂ ಇವರಿಗೆ ಪವಿತ್ರ ವಸ್ತುಗಳಾಗಿದ್ದವೆಂದೂ, ಈ ಕಾರಣದಿಂದಲೇ ತಮ್ಮ ಸಂತತಿಯನ್ನು ಕದಂಬರೆಂದು ಕರೆದುಕೊಂಡರೆಂದೂ ಹಾಗೂ ಕದಂಬ ರಾಜರು ಮಯೂರವರ್ಮ, ಮೃಗೇಶ್ವರವರ್ಮ ಮೊದಲಾದ ಹೆಸರುಗಳನ್ನು ಹೊಂದಿದ್ದರೆಂದೂ ತಿಳಿದುಬರುತ್ತದೆ. ಇದು ಸತ್ಯಕ್ಕೆ ಸಮೀಪವಾದ ವಿವರಣೆಯಾಗಿದೆ.

ಮೇಲ್ಕಂಡ ವಿಭಿನ್ನ ಹೇಳಿಕೆಗಳಿಂದ ಕದಂಬರ ಮೂಲವನ್ನು ಸ್ಪಷ್ಟವಾಗಿ ಹೇಳಲಾಗುವುದಿಲ್ಲ ಮತ್ತು ಕದಂಬ ರಾಜ್ಯ ಸ್ಥಾಪನೆಯ ಕಾಲವು ನಿಖರವಾಗಿ ತಿಳಿದುಬರುವುದಿಲ್ಲ.

## 6.3 ರಾಜಕೀಯ ಇತಿಹಾಸ

ಕದಂಬ ಸಂತತಿಯ ಸ್ಥಾಪಕನಾದ ಮಯೂರವರ್ಮನ ಆಳ್ವಿಕೆಯ ಘಟನಾವಳಿಗಳನ್ನು ವಿವರಿಸುವ ಸಮಕಾಲೀನ ಐತಿಹಾಸಿಕ ಆಧಾರಗಳು ದೊರೆತಿಲ್ಲ. ಮಯೂರವರ್ಮನು ತ್ರಿಕೂಟ, ಅಭೀರ, ಪಲ್ಲವ, ಶಕಸ್ಥಾನ, ಸೇಂದ್ರಕ, ಪುನ್ನಾಟ ಮತ್ತು ಮೌಖರಿ ರಾಜರನ್ನೆಲ್ಲ ಗೆದ್ದು ಚಂದ್ರಮೌಳಿಯ ಹತ್ತಿರ ಒಂದು ಕೆರೆಯನ್ನು ಕಟ್ಟಿಸಿದನೆಂದು ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯ ಬಳಿಯಲ್ಲಿ ದೊರೆತಿರುವ ಪ್ರಾಕೃತ ಶಾಸನದಲ್ಲಿ ತಿಳಿಸಿದೆ. ಆದರೆ ಗಂಗಾನದಿ ತೀರದಲ್ಲಿದ್ದ ಮೌಖರಿ ರಾಜ್ಯವನ್ನು, ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯದಲ್ಲಿದ್ದ ದೂರದ ಪ್ರದೇಶಗಳನ್ನು ಮಯೂರವರ್ಮನು ಗೆದ್ದನೆಂದು ವರ್ಣಿಸಿರುವುದು ಉತ್ಪ್ರೇಕ್ಷೆಯಿಂದ ಕೂಡಿದೆ. ಚಂದ್ರವಳ್ಳಿಯ ಶಾಸನದ ವಿಷಯವಾಗಿ ಭಿನ್ನಾಭಿಪ್ರಾಯಗಳಿವೆ. ಈ ಶಾಸನವನ್ನು ಇತ್ತೀಚೆಗೆ ಓದಿ ಹಿಂದಿನ ತಪ್ಪುಗಳನ್ನು ಮನಗಾಣಿಸಲಾಗಿದೆ. ಮಯೂರವರ್ಮನು ಕ್ರಿ.ಶ. 345 ರಿಂದ 360 ರವರೆಗೂ ಆಳಿದನೆಂದೂ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಅವನ ಆಳ್ವಿಕೆಯ ಕಾಲವನ್ನು ತಿಳಿಯಲು ಯಾವ ಸಮಕಾಲೀನ ಆಧಾರಗಳೂ ದೊರೆತಿಲ್ಲ. ಮಯೂರವರ್ಮನ ನಂತರ ಕ್ರಮವಾಗಿ ಅವನ ಮಗನಾದ ಕಂಗವರ್ಮನೂ, ಮೊಮ್ಮಗನಾದ ಭಗೀರಥನು ಆಳಿದರು. ಮಯೂರವರ್ಮನ ಆಳ್ವಿಕೆಯ ಕಾಲದಂತೆಯೇ ಇವರ ಆಳ್ವಿಕೆಯ ಕಾಲದ ಬಗ್ಗೆಯೂ ಹೆಚ್ಚಿನ ವಿವರಗಳು ಲಭ್ಯವಾಗಿಲ್ಲ. ಕದಂಬರ ಕಾಲದ ಕೆಲವು ಪದ್ಮಟಂಕಗಳ ಮೇಲೆ ಭಗೀ ಎಂಬ ಅಕ್ಷರಗಳು ಕಂಡು ಬರುವುದರಿಂದ ಇವು ಭಗೀರಥನ ಕಾಲಕ್ಕೆ ಸೇರಿದವುಗಳೆಂದು ಊಹಿಸಲಾಗಿದೆ. ಭಗೀರಥನ ತರುವಾಯ ಆಳ್ವಿಕೆಯನ್ನಾರಂಭಿಸಿದ ರಘುವಿಗೆ ಮಕ್ಕಳಿಲ್ಲದ ಕಾರಣ ಅವನ ಅಲ್ಪ ಕಾಲದ ಆಳ್ವಿಕೆಯ ಅನಂತರ, ಹಲಸಿ ಪ್ರಾಂತ್ಯದಲ್ಲಿ ಆಳುತ್ತಿದ್ದ ಅವನ ತಮ್ಮನಾದ ಕಾಕುಸ್ಥವರ್ಮನು ಕದಂಬ ಸಿಂಹಾಸನವನ್ನೇರಿದನು.

ಬನವಾಸಿಯ ಕದಂಬ ರಾಜರಲ್ಲಿ ಅತ್ಯಂತ ಪ್ರಸಿದ್ಧನಾದವನೆಂದರೆ ಕಾಕುಸ್ಥವರ್ಮನು. ಇವನ ಆಳ್ವಿಕೆ ಕಾಲ ಕ್ರಿ.ಶ. ಸುಮಾರು 420 ರಿಂದ 450 ರವರೆಗೆಂದು ತಿಳಿಯಲಾಗಿದೆ. ತನ್ನ ಅಣ್ಣನಾದ ರಘುವಿನ ಕಾಲದಲ್ಲಿ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದ ಕಾರಣ, ಇವನು ಸ್ವಾಭಾವಿಕವಾಗಿಯೇ ನುರಿತ ಯೋಧನಾಗಿದ್ದನು. ಹಲಸಿಯ ಒಂದು ಶಾಸನದಿಂದ ಕದಂಬ ದಳಪತಿಗಳಲ್ಲೊಬ್ಬನಾದ ಶೃತಕೀರ್ತಿಯು ಯುದ್ಧದಲ್ಲಿ ಪ್ರಾಣಾಪಾಯಕ್ಕೊಳಗಾಗಿದ್ದ ಕಾಕುಸ್ಥವರ್ಮನನ್ನು ರಕ್ಷಿಸಿದ ಅಂಶವು ತಿಳಿದು ಬರುತ್ತದೆ. ಕಾಕುಸ್ಥವರ್ಮನು ಯುದ್ಧ ಮತ್ತು ಆಡಳಿತಗಳಲ್ಲಿ ಒಳ್ಳೆ ಅನುಭವವನ್ನು ಅಧಿಕಾರಕ್ಕೆ ಬರುವ ಮೊದಲೇ ಗಳಿಸಿದ್ದನೆಂದು ತಿಳಿದು ಬರುತ್ತದೆ. ಅಲ್ಲದೆ ತಾಳಗುಂದ ಶಾಸನವು ಆತನನ್ನು ದರ್ಮಿಷ್ಟನಾದ ಪ್ರಭುವಾಗಿದ್ದನೆಂದೂ, ಕದಂಬ ಕುಲಭೂಷಣ ಪ್ರಾಯನೆಂದು ವರ್ಣಿಸಿದೆ. ಇದೇ ಶಾಸನದ ಪ್ರಕಾರ ಧಾರ್ಮಿಕ ಕೇಂದ್ರವಾಗಿದ್ದ ತಾಳಗುಂದ ಅಥವಾ ತಾಣಗುಂದೂರು ಗ್ರಾಮಕ್ಕೆ ಬೇಟಿಯ ನಿಮಿತ್ತ ಹೋಗಿದ್ದ ಕಾಕುಸ್ಥವರ್ಮನು

ಅಲ್ಲಿ ಪ್ರಣವೇಶ್ವರ ಎಂಬ ಕೆರೆಯನ್ನು ಕಟ್ಟಿಸಿದನೆಂದು ತಿಳಿದು ಬರುತ್ತದೆ. ತಾಣಗುಂದೂರಿನ ಬಳಿಯ ಕೆರೆಗೆ ಇಂದಿಗೂ ಪಣಾವನಕೆರೆ ಎಂಬ ಹೆಸರಿದೆ. ಪ್ರಣವೇಶ್ವರ ದೇವಾಲಯವಿದ್ದು ಈ ಸ್ಥಳಕ್ಕೆ ಶಾತವಾಹನರ ಪ್ರಭೂಗಳು ಬೇಟಿಕೊಡುತ್ತಿದ್ದರೆಂಬ ಅಂಶವೂ ತಿಳಿದು ಬರುತ್ತದೆ.

ಕಾಕುಸ್ಥವರ್ಮನ ಕೀರ್ತಿಯು ವಿಶೇಷವಾಗಿ ವ್ಯಾಪಿಸಿ ಭಾರತದ ಬೇರೆ ಬೇರೆ ಪ್ರದೇಶದಲ್ಲಿ ಆಳುತ್ತಿದ್ದ ರಾಜರು ಕದಂಬ ಮನೆತನದೊಡನೆ ವೈವಾಹಿಕ ಸಂಬಂಧಗಳನ್ನೂ ಬೆಳಿಸಿದ ಅಂಶವೂ ತಿಳಿದು ಬರುತ್ತದೆ. ಚಂದ್ರಗುಪ್ತ ವಿಕ್ರಮಾದಿತ್ಯನ ಮಗನಾದ ಕುಮಾರಗುಪ್ತನು, ಕಾಕುಸ್ಥವರ್ಮನ ಒಬ್ಬಳು ಪುತ್ರಿಯನ್ನೂ, ವಿದರ್ಭದ ವಾಕಾಟಕ ಅರಸ ನರೇಂದ್ರನು ಇನ್ನೊಬ್ಬ ಪುತ್ರಿಯನ್ನೂ, ಹಾಗೂ ಪಶ್ಚಿಮ ತೀರದಲ್ಲಿ ಆಳುತ್ತಿದ್ದ ಅಳುಪ ರಾಜನು ಕಾಕುಸ್ಥವರ್ಮನ ಮತ್ತೊಬ್ಬ ಮಗಳಾದ ಲಕ್ಷ್ಮಿಯನ್ನೂ ವಿವಾಹವಾಗಿದ್ದರೆಂದೂ ತಿಳಿದು ಬರುತ್ತದೆ. ಅಲ್ಲದೆ **'ಕುಂತಳೇಶ್ವರ ದೌತ್ಯ'** ದಿಂದ ಗುಪ್ತ, ವಾಕಾಟಕ ಹಾಗೂ ಕದಂಬ ಮನೆತನಗಳಿಗೆ ಸ್ನೇಹವಿತ್ತೆಂದು ಗೊತ್ತಾಗುತ್ತದೆ. ಕಾಕುಸ್ಥವರ್ಮನ ಮತ್ತೊಬ್ಬ ಮಗಳು ತಲಕಾಡು ಗಂಗರಾಜನಾದ ಮಾಧವನನ್ನು ವಿವಾಹವಾಗಿದ್ದಳು.

ಕಾಕುಸ್ಥವರ್ಮನಿಗೆ ಶಾಂತಿವರ್ಮ, ಮಾಂಧಾತವರ್ಮ ಹಾಗೂ ಕೃಷ್ಣವರ್ಮ ಎಂಬ ಮೂವರು ಮಕ್ಕಳಿದ್ದರು. ಇವನ ಜೀವಿತ ಕಾಲದಲ್ಲೇ ತನ್ನ ಹಿರಿಯ ಪುತ್ರನಾದ ಶಾಂತಿವರ್ಮನಿಗೆ ಪಟ್ಟ ಕಟ್ಟಿದನು. ಆದರೆ ಶಾಂತಿವರ್ಮನ ಅಕಾಲ ಮರಣದ ಪ್ರಯುಕ್ತ ರಾಜ್ಯಭಾರವನ್ನು ತಾನೇ ಪುನಃ ವಹಿಸಿಕೊಳ್ಳಬೇಕಾಯಿತು. ಅನಂತರ ಶಾಂತಿವರ್ಮನ ಮಗನಾದ ಯುವರಾಜ ಮೃಗೇಶನು ಪಟ್ಟಕ್ಕೆ ಬಂದನು. ಮೃಗೇಶವರ್ಮನ ಕಾಲದಲ್ಲಿ ಪಲ್ಲವ ರಾಜರಾದ ಸಿಂಹವರ್ಮ ಮತ್ತು ವಿಜಯ ಸ್ಕಾಂದವರ್ಮರು ಕದಂಬ ರಾಜ್ಯದ ಮೇಲೆ ದಂಡೆತ್ತಿ ಬಂದು ಪೂರ್ವ ಭಾಗಗಳನ್ನು ಆಕ್ರಮಿಸಿಕೊಂಡರು. ಆದರೆ ಇವರನ್ನು ಎದುರಿಸುವಲ್ಲಿ ಮೃಗೇಶವರ್ಮ ಹಾಗೂ ಕಾಕುಸ್ಥವರ್ಮನ ಆಳಿಯನಾದ ಅಳುಪ ರಾಜ ಪಶುಪತಿಯೂ ಸೇರಿ ಪಲ್ಲವ ಸಾಮಂತರಾದ ಬಾಣ, ಸೇಂದ್ರಕ ಮೊದಲಾದವರನ್ನು ಸೋಲಿಸಿದರು.

ಕಾಕುಸ್ಥವರ್ಮನ ಮರಣದ ನಂತರ ಪಟ್ಟಕ್ಕೆ ಬಂದ ಮೃಗೇಶವರ್ಮನ ಕಾಲದಿಂದ ಕದಂಬರಲ್ಲಿ ದಾಯಾದಿ ಕಲಹವು ಪ್ರಾರಂಭವಾಯಿತು. ಪಲ್ಲವರ ಸಹಾಯ ಪಡೆದ ಮೃಗೇಶವರ್ಮನ ಚಿಕ್ಕಪ್ಪನಾದ ಕೃಷ್ಣವರ್ಮನು, ಮೃಗೇಶವರ್ಮನನ್ನು ಸೋಲಿಸಿ ತ್ರಿಪರ್ವತ ಅಥವಾ ಉಚ್ಚಂಗಿಯಲ್ಲಿ ತನ್ನ ಆಡಳಿತವನ್ನು ಸ್ಥಾಪಿಸಿದನು. ಇದಕ್ಕೆ ಉಚ್ಚಂಗಿ ಶಾಕೆಯ ಕದಂಬರೆಂದೆ ಹೆಸರಾಯಿತು. ಈ ಎರಡು ಮನೆತನಗಳ ನಡುವೆ ಅನೇಕ ಯುದ್ಧಗಳೇ ಜರುಗಿದವು. ಧರ್ಮ ಸಹಿಷ್ಣುವಾಗಿದ್ದ ಮೃಗೇಶವರ್ಮನು ಸ್ವತಃ ವೈದಿಕ ಮತೀಯನಾಗಿದ್ದರೂ, ಜೈನ ಮತೀಯರಿಗೆ ಉದಾರ ದಾನವನ್ನು ನೀಡಿದನು. ಮೃಗೇಶವರ್ಮನ ಮೂವರು ಪುತ್ರರಲ್ಲಿ ಹಿರಿಯ ಮಗನಾದ ರವಿವರ್ಮನು ಪಟ್ಟಕ್ಕೆ ಬಂದನು. ಮೃಗೇಶವರ್ಮನ ಕಾಲದಲ್ಲಿ ಆರಂಭವಾದ ದಾಯಾದಿ ಕಲಹವು ಈತನ ಕಾಲದಲ್ಲೂ ಮುಂದುವರಿಯಿತು. ತ್ರಿಪರ್ವತ ಕದಂಬ ಶಾಖೆಯ ಒಂದನೇ ಕೃಷ್ಣವರ್ಮನ ಮಗ ವಿಷ್ಣುವರ್ಮ ಮತ್ತು ಮೊಮ್ಮಗ ಎರಡನೇ ಕೃಷ್ಣವರ್ಮ ಮೊದಲಾದವರು ಬನವಾಸಿ ಕದಂಬರಡನೆ ದಾಯಾದೀ ಕಲಹವು ಮುಂದುವರಿಸಿದರು. ಪರಿಣಾಮವಾಗಿ ಎರಡು ಮನೆತನಗಳು ಅವನತಿಯ ಹಾದಿ ಹಿಡಿದವು. ಶತೃಗಳನ್ನು ನಿರಂತರವಾಗಿ ಎದುರಿಸಿ ರಾಜ್ಯವನ್ನು ಶತ್ರುಗಳು ಸಂಪೂರ್ಣವಾಗಿ ಆಕ್ರಮಿಸಿದಂತೆ ಮಾಡಲು ಯತ್ನಿಸಿದವರಲ್ಲಿ ಬನವಾಸಿಯ ರವಿವರ್ಮ ಮತ್ತು ಅವನ ಮಗ ಹರಿವರ್ಮ. ಬನವಾಸಿ ಕದಂಬರ ಕಡೆಯ ಅರಸನೆಂದರೆ ರವಿವರ್ಮ. ಈತನು ಕ್ರಿ.ಶ. 6ನೇ ಶತಮಾನದ ಉತ್ತರಾರ್ಧದವರೆಗೂ ಸ್ವತಂತ್ರವಾಗಿ ಆಳುತ್ತಿದ್ದನು. ಆವೇಳೆಗೆ ಪ್ರಾಬಲ್ಯಕ್ಕೆ ಬಂದ ಬಾದಾಮಿ ಚಾಳುಕ್ಯ ವಂಶದ 1ನೇ ಪುಲಿಕೇಶಿ ಮತ್ತು ಆತನ ಮಗ 1ನೇ ಕೀರ್ತಿವರ್ಮನು ಕದಂಬರನ್ನು ಸಂಪೂರ್ಣವಾಗಿ ಸೋಲಿಸಿದರು. ಕ್ರಿ.ಶ. 11 ಮತ್ತು 12ನೇ ಶತಮಾನದಲ್ಲಿ ಬನವಾಸಿ, ಹಾನಗಲ್

ಮತ್ತು ಗೋವೆ ಪ್ರದೇಶಗಳಲ್ಲಿ ಉಪಶಾಖೆಗಳನ್ನಾರಂಭಿಸಿದರು. ಕದಂಬ ಶಾಖೆಯ ಅರಸರು ಕಲ್ಯಾಣ ಚಾಲುಕ್ಯರಿಗೆ ಸಾಮಂತರಾಗಿ ಆಳ್ವಿಕೆ ನಡೆಸಿದರು.

## 6.4 ಆಡಳಿತ ವ್ಯವಸ್ಥೆ

ಬನವಾಸಿ 12000 ಗಳ ನಾಡು ಎಂದು ಪ್ರಸಿದ್ಧವಾಗಿದ್ದ ಕದಂಬರ ರಾಜ್ಯ, ಇಂದಿನ ಶಿವಮೊಗ್ಗ, ಧಾರವಾಡ ಹಾಗೂ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನೊಳಗೊಂಡಿತ್ತು. ರಾಜತ್ವವು ವಂಶ ಪಾರಂಪರ್ಯವಾಗಿತ್ತು ಹಾಗೂ ರಾಜನೇ ಆಡಳಿತ ವ್ಯವಸ್ಥೆಯ ಉನ್ನತಾಧಿಕಾರಿಯಾಗಿದ್ದನು. ಹಿರಿಯ ಮಗನೆ ಉತ್ತರಾಧಿಕಾರಿಯಾಗುವ ಸಂಪ್ರದಾಯ ರೂಢಿಯಲ್ಲಿತ್ತು. ರಾಜ್ಯಾಡಳಿತದ ಸಹಾಯಕ್ಕಾಗಿ ಮಂತ್ರಿಗಳನ್ನು ದಂಡ ನಾಯಕರನ್ನು ಹಾಗೂ ಇತರ ಅಧಿಕಾರ ವರ್ಗವನ್ನು ನೇಮಿಸಲಾಗಿತ್ತು. ಅರಸನು ನಿರಂಕುಶಾಧಿಕಾರಿಯಾಗಿರಲಿಲ್ಲ. ಧರ್ಮಶಾಸ್ತ್ರಗಳನ್ನು ಅರಿತಿದ್ದ ಕದಂಬ ರಾಜರು ಯಾಗಗಳನ್ನಾಚರಿಸುತ್ತಿದ್ದರು. 1ನೇ ಕೃಷ್ಣವರ್ಮನು ವೈದಿಕ ಸಂಪ್ರದಾಯಕ್ಕನುಗುಣವಾಗಿ ಅಶ್ವಮೇದ ಯಾಗವನ್ನು ಆಚರಿಸಿದನು. ರಾಜನೀತಿಶಾಸ್ತ್ರ ನಿಪುಣರಾಗಿದ್ದ ಕದಂಬರು ನೆರೆಯ ರಾಜ್ಯಗಳೊಡನೆ ವಿವಾಹ ಸಂಬಂಧಗಳನ್ನೇರ್ಪಡಿಸುವ ಮೂಲಕ ಬೇರೆ ಬೇರೆ ರಾಜ್ಯಗಳ ದಾಳಿಗಳನ್ನು ತಡೆಯುವುದರಲ್ಲಿ ಯಶಸ್ವಿಯಾಗಿದ್ದರು. ಪಲ್ಲವರೊಡನೆ ನಿರಂತರ ಹೋರಾಟ ನಡೆಸುತ್ತಿದ್ದದಿಂದ ಪ್ರಬಲ ಯೋಧ ಪಡೆಯನ್ನು ಹೊಂದಿದ್ದರು. ರಾಜ್ಯಗಳನ್ನು ಪ್ರಾಂತಗಳನ್ನಾಗಿ ವಿಂಗಡಿಸಿದ್ದರು. ಪ್ರಾಂತ್ಯಧಿಕಾರಿಗಳು ರಾಜನ ನಿರೂಪದ ಪ್ರಕಾರ ಪ್ರಾಂತ್ಯಗಳ ಆಡಳಿತ ನಿರ್ವಹಿಸುತ್ತಿದ್ದರು. ಸಾಧಾರಣವಾಗಿ, ಯುವರಾಜ ಹಾಗೂ ಇತರ ರಾಜಕುಮಾರರು ಪ್ರಾಂತ್ಯಾಧಿಕಾರಿಗಳಾಗಿ ನೇಮಿಸಲ್ಪಡುತ್ತಿದ್ದರು. ಆಡಳಿತದ ಒಂದು ಮುಖ್ಯ ಘಟಕವಾಗಿದ್ದ ಗ್ರಾಮವು ಒಬ್ಬ ಮುಖಂಡನನ್ನು ಹೊಂದಿರುತ್ತಿತ್ತು. ಗ್ರಾಮದ ಮುಖಂಡನನ್ನು ಗವುಂಡನೆಂದು ಕರೆಯಲಾಗುತ್ತಿತ್ತು ಅಲ್ಲದೆ ಗ್ರಾಮಸಭೆಗಳೂ ಅಸ್ತಿತ್ವದಲ್ಲಿದ್ದವು. ವ್ಯವಸಾಯ ಮತ್ತು ವ್ಯಾಪಾರಗಳು ಉತ್ತಮ ಸ್ಥಿತಿಯಲ್ಲಿದ್ದವು ಹಾಗೂ ವೃತ್ತಿ ಸಂಘಗಳೂ ಅಸ್ತಿತ್ವದಲ್ಲಿದ್ದವು. ಕದಂಬ ನಾಡಿನಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳೆಂದರೆ ಪದ್ಮಟಂಕ, ಪಣ ಹಾಗೂ ಗದ್ಯಾಣಗಳು ಚಲಾವಣೆಯಲ್ಲಿದ್ದವು.

ಕದಂಬರ ಆಡಳಿತ ಕ್ರಿ.ಶ. 6 ನೇ ಶತಮಾನದ ಅಂತ್ಯದ ವೇಳೆಗೆ ಕೊನೆಗೊಂಡಿತಾದರೂ ಈ ಮನೆತನದ ಶಾಖೆಗಳು ಕ್ರಮೇಣ ಕನ್ನಡ ನಾಡಿನಲ್ಲಿ ಅಲ್ಲಲ್ಲಿ ತಲೆಯೆತ್ತಿದವು. ಕ್ರಿ.ಶ. 11 ಮತ್ತು 12 ನೇ ಶತಮಾನಗಳಲ್ಲಿ ಗೋವ, ಹಾನಗಲ್, ನಾಗರಖಂಡ ಮೊದಲಾದ ಕದಂಬ ಶಾಖೆಗಳ ರಾಜರು ಕಲ್ಯಾಣಿ ಚಾಳುಕ್ಯರಿಗೆ ಅಧೀನರಾಗಿ ರಾಜ್ಯವಾಳುತ್ತಿದ್ದರು. ಕದಂಬ ಮನೆತನದ ಕೆಲವು ಶಾಖೆಗಳು ವಿಜಯನಗರ ಸಾಮ್ರಾಜ್ಯಸ್ಥಾಪನೆಯಾಗುವವರೆಗೂ ಸಣ್ಣಪುಟ್ಟ ಸಂಸ್ಥಾನಗಳನ್ನು ಸ್ಥಾಪಿಸಿಕೊಂಡು ಆಡಳಿತ ನಡೆಸಿದರು.

## 6.5 ಕದಂಬರ ಕಾಲದಲ್ಲಿ ಸಂಸ್ಕೃತಿ

ಕದಂಬ ನಾಡಿನಲ್ಲಿ ವೈದಿಕ ಮತ್ತು ಜೈನಧರ್ಮಗಳು ಅಭಿವೃದ್ಧಿ ಸ್ಥಿತಿಯಲ್ಲಿದ್ದವು. ಬೌದ್ಧಮತವು ಮೊದಲೇ ಇಲ್ಲಿ ಪ್ರಸಾರವಾಗಿದ್ದರೂ ಅದು ಹೆಚ್ಚು ಸಂಖ್ಯೆಯಲ್ಲಿ ಅನುಯಾಯಿಗಳನ್ನು ಹೊಂದಿದ್ದಂತೆ ಸಮಕಾಲೀನ ಆಧಾರಗಳಿಂದ ತಿಳಿದು ಬರುವುದಿಲ್ಲ. ಅಶೋಕ ಮತ್ತು ಶಾತವಾಹನರ ಕಾಲದಲ್ಲಿ ಈ ಪ್ರದೇಶದಲ್ಲಿ ಬೌದ್ಧ ಸ್ತೂಪಗಳು ಮತ್ತು ಮಠಗಳೂ ಸ್ಥಾಪಿತವಾಗಿದ್ದವು. ಕ್ರಿ.ಶ. 7 ನೇ ಶತಮಾನದಲ್ಲಿ ಬನವಾಸಿಯನ್ನು ಸಂದರ್ಶಿಸಿದ ಹೂಯತ್ಸಾಂಗನು ಅಲ್ಲಿ ಅನೇಕ ಬೌದ್ಧ ಚೈತ್ಯಾಲಯಗಳೂ, ಮಠಗಳು ಇದ್ದುದನ್ನು ಕಂಡನು.

ಕದಂಬ ಅರಸರು ಶೈವ ಪಂಥಕ್ಕೆ ಸೇರಿದ ವೈದಿಕ ಮತಾವಲಂಭಿಗಳಾಗಿದ್ದರು. ಇವರ ಕಾಲದಲ್ಲಿ ಚತುರ್ವರ್ಣ ಪದ್ಧತಿ ಯತಾವತ್ತಾಗಿ ಆಚರಣೆಯಲ್ಲಿರಲಿಲ್ಲ. ಇದು ಬ್ರಾಹ್ಮಣ ವರ್ಗಕ್ಕೆ ಸೀಮಿತಗೊಂಡಿತು. ಇವರ ಕಾಲದಲ್ಲಿ ಬ್ರಾಹ್ಮಣವರ್ಗ ಈ ಭಾಗದ ಕನ್ನಡ ನಾಡಿನಲ್ಲಿ ಒಂದು ಪ್ರತಿಷ್ಠಿತ ವರ್ಗವಾಗಿ ರೂಪಗೊಂಡಿದು ಸ್ಪಷ್ಟವಾಗಿ ಗೋಚರವಾಗುತ್ತದೆ. ಉಳಿದವರ್ಗದ ಬಗ್ಗೆ ಸ್ಪಷ್ಟ ಮಾಹಿತಿಗಳಿಲ್ಲ. ಆರಂಭ ಕಾಲದಲ್ಲಿ ತಾಳಗುಂದದ ಪ್ರಣವೇಶ್ವರ ಇವರ ಆರಾಧ್ಯ ದೈವವಾಗಿತ್ತು. ಮಯೂರವರ್ಮನು ಅಹಿಚ್ಛತ್ರದಿಂದ ಅನೇಕ ಬ್ರಾಹ್ಮಣ ಕುಟುಂಬಗಳನ್ನು ಆಮಂತ್ರಿಸಿ ಕದಂಬನಾಡಿನಲ್ಲಿ ವೇದಾಧ್ಯಯ ಕಾರ್ಯವು ನಿರ್ದಿಷ್ಟವಾಗಿ ಮುಂದುವರಿಯವಂತೆ ಮಾಡಿದ್ದನೆಂದು ಕದಂಬ ಶಾಖೆಯ ಶಾಸನಗಳಿಂದ ತಿಳಿದು ಬರುತ್ತದೆ. ಅನಂತರ ಸ್ಥಾಪಿತವಾದ ಕದಂಬ ಶಾಖೆಯ ಅರಸರು ಮಾಲತಿ ಮಧುರೇಶ್ವರನನ್ನು ಆರಾಧಿಸುತ್ತಿದ್ದರು. ಈ ವಂಶದ ಅರಸರು ಬ್ರಾಹ್ಮಣರಿಗೂ, ವಿದ್ಯಾಭ್ಯಾಸಕ್ಕೂ ಆದ್ಯತೆ ನೀಡಿದ್ದರು. ಮೃಗೇಶವರ್ಮನು ಧರ್ಮಮಹಾರಾಜನೆಂಬ ಬಿರುದನ್ನು ಹೊಂದಿದ್ದನು. ಮೃಗೇಶವರ್ಮನ ಮಗ ರವಿವರ್ಮನು ಗೋವಿಂದಸ್ವಾಮಿ ಎಂಬ ಬ್ರಾಹ್ಮಣ ವಿದ್ವಾಂಸನಿಗೆ ಎರಡು ಗ್ರಾಮಗಳನ್ನು ದತ್ತಿಯಾಗಿ ಕೊಟ್ಟು ಪುರಸ್ಕರಿಸಿದನು. ಅವರು ಅನೇಕ ಅಗ್ರಹಾರಗಳನ್ನು ಸ್ಥಾಪಿಸಿ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದರು. ಇವರ ರಾಜ್ಯದಲ್ಲಿ ಅಂದಿನ ಪ್ರಸಿದ್ಧ ದಾರ್ಮಿಕ ಕೇಂದ್ರಗಳೆಂದರೆ ಬನವಾಸಿ, ತಾಳಗುಂದ ಮೊದಲಾದ ಪಟ್ಟಣಗಳು.

ಅನ್ಯಮತ ಸಹಿಷ್ಣುಗಳಾದ ಕದಂಬರು, ತಾವು ಅನುಸರಿಸುತ್ತಿದ್ದ ವೈದಿಕ ಮತವೇ ಅಲ್ಲದೆ, ಜೈನ, ಬೌದ್ಧ ಮೊದಲಾದ ಧರ್ಮಗಳಿಗೆ ಸಮಾನ ಪ್ರೋತ್ಸಾಹ ನೀಡಿದ್ದರು. ಜೈನ ಯತಿಗಳಿಗೂ, ಸಂಸ್ಥೆಗಳಿಗೂ ಪ್ರೋತ್ಸಾಹ ನೀಡಿದ್ದ ಹರಿವರ್ಮನು ಹಲಸಿಯಲ್ಲಿ ಬಸದಿಯೊಂದನ್ನು ಸ್ಥಾಪಿಸಲು ಪ್ರೋತ್ಸಾಹ ನೀಡಿದುದಲ್ಲದೆ, ಭೂಮಿಯನ್ನು ದತ್ತಿಯಾಗಿ ಕೊಟ್ಟು ಅಲ್ಲಿ ಪ್ರತಿವರ್ಷವೂ ಆಚರಿಸಲ್ಪಡುತ್ತಿದ್ದ ಮಹೋತ್ಸವ ಯಶಸ್ವಿಯಾಗಿ ಮುಂದುವರಿಯಲು ಸಹಕಾರಿಯಾದನು. ಈ ರೀತಿ ಪರಮತ ಸಹಿಷ್ಣುಗಳಾದ ಕದಂಬ ಅರಸರು ವೈದಿಕ ದೇವಾಲಯಗಳ ಹಾಗೂ ಜೈನ ಬಸದಿಗಳ ರಚನೆಗೆ ಪ್ರೋತ್ಸಾಹವನ್ನು ನೀಡುತ್ತಿದ್ದರು. ಹಲಸಿಯ ಜೈನ ಬಸದಿ ಮೃಗೇಶವರ್ಮನ ಕಾಲದಲ್ಲಿ ನಿರ್ಮಾಣವಾಯಿತು. ಈ ಬಸದಿಯು ಗರ್ಭಗೃಹ, ಶುಕನಾಸಿ ಮತ್ತು ಮುಖಮಂಟಪಗಳಿಂದ ಕೂಡಿದೆ. ಹಲಸಿಯ ಹಟ್ಟಿಕೇಶ್ವರ, ಸುವರ್ಣೇಶ್ವರ ಹಾಗೂ ಕಲ್ಲೇಶ್ವರ ದೇವಾಲಯಗಳನ್ನು ಕದಂಬ ಶೈಲಿಯಲ್ಲಿ ಕಟ್ಟಲಾಗಿದೆ. ಆ ಕಾಲದಲ್ಲಿ ನಿರ್ಮಾಣಗೊಂಡ ಅನೇಕ ದೇವಾಲಯಗಳು ಈಗ ಶಿಥಿಲವಾಗಿವೆ.

## 6.6 ಸಾರಾಂಶ

ದಖ್ಖನ್ನಿನ ಭೂಭಾಗದಲ್ಲಿ ಮೌರ್ಯರ ಮತ್ತು ಶಾತವಾಹನರ ಆಳ್ವಿಕೆಯ ತರುವಾಯ ದಕ್ಷಿಣ ಕರ್ನಾಟಕದ ಭಾಗದಲ್ಲಿ ಬನವಾಸಿ ಕದಂಬರು ರಾಜಕೀಯವಾಗಿ ಪ್ರಾಬಲ್ಯಕ್ಕೆ ಬಂದು ಸ್ವತಂತ್ರ ರಾಜ್ಯ ಕಟ್ಟಿದ ವಿಷಯವನ್ನು ಈ ಘಟಕದಲ್ಲಿ ನಿರೂಪಿಸಲಾಗಿದೆ. ಕದಂಬರ ಹಿನ್ನಲೆ ಮತ್ತು ಮೂಲದ ಬಗ್ಗೆ ಇರುವ ಜಿಜ್ಞಾಸೆಗಳನ್ನು ನಿಮಗೆ ಮನವರಿಕೆ ಮಾಡಲು ಯತ್ನಿಸಲಾಗಿದೆ.

ಅನಂತರ ಇವರ ಕಾಲದಲ್ಲಿ ದೊರೆತಿರುವ ಶಾಸನ ಆಧಾರಗಳ ಸಹಾಯದಿಂದ ರಚಿತವಾಗಿರುವ ರಾಜಕೀಯ ವಿಷಯವನ್ನು ಮತ್ತು ಕದಂಬ ಅರಸರ ಪ್ರಮುಖರ ಸಾಧನೆಯನ್ನು ನಿಮಗೆ ಪರಿಚಯಿಸಲು ಯತ್ನಿಸಿದ್ದೇವೆ. ಇವರು ರಾಜಕೀಯ ವ್ಯವಸ್ಥೆ ಮತ್ತು ಆಡಳಿತ ಪದ್ಧತಿಯಲ್ಲಿ ಮೌರ್ಯ ಶಾತವಾಹನ ಪರಂಪರೆಯನ್ನು ಮುಂದುವರಿಸಿದ ವಿಷಯವನ್ನು ತಿಳಿದಿದ್ದೀರಿ.

ಆರಂಭ ಕಾಲದ ಇತಿಹಾಸದಲ್ಲಿ ಇವರ ಸಾಂಸ್ಕೃತಿಕ ಸಾಧನೆಯು ಶ್ಲಾಘನೀಯವಾದುದು. ಇವರು ವೈದಿಕ ಮತದ ಅನುಯಾಯಿಯಾಗಿದ್ದರು. ಜೈನ ಮತಕ್ಕೆ ಉದಾರವಾದ ಪ್ರೋತ್ಸಾಹ

ನೀಡಿದ್ದರು ಹಾಗೂ ಬೌದ್ಧ ಧರ್ಮ ಇವರ ಆಳ್ವಿಕೆ ಪೂರ್ವ ಕಾಲದಲ್ಲಿ ಅಸ್ತಿತ್ವದಲ್ಲಿದ್ದರು ಅದು ಹೆಚ್ಚಿನ ಅನುಯಾಯಿಗಳನ್ನು ಹೊಂದಿರದೆ ಕ್ಷೀಣ ಸ್ಥಿತಿಯನ್ನು ತಲುಪಿದ ವಿಷಯವನ್ನು ನಿಮ್ಮ ಗಮನಕ್ಕೆ ತಂದಿದ್ದೇವೆ.

ಇವರ ಕಲಾಶೈಲಿಯು ಮುಂದೆ ಆಚರಣೆಗೆ ಬಂದ ಚಾಲುಕ್ಯ ಹೊಯ್ಸಳರ ಮಾದರಿಗೆ ನಾಂದಿ ಹಾಡಿದ್ದಾರೆ. ಬೌದ್ಧ ಚೈತಾಲಯ, ಜಿನಾಲಯ ಹಾಗೂ ವೈದಿಕ ಗುಡಿಗಳ ಕಲಾ ಬೆಳವಣಿಗೆಯ ಆರಂಭದ ಕಾಲವನ್ನು ಕದಂಬರ ಕಲಾಕೃತಿಗಳ ನಿರ್ಮಾಣವು ಸಾಕ್ಷಿಯಾಗಿರುವ ವಿಷಯವನ್ನು ನಿಮಗೆ ತಿಳಿಸಲಾಗಿದೆ. ಆದರೆ ಅವು ಇಂದು ಬಹಳ ಮಟ್ಟಿಗೆ ಶಿಥಿಲವಾಗಿರುವ ವಿಷಯವನ್ನು ಈ ಘಟಕದಲ್ಲಿ ವಿವರಿಸಿ ನಿಮಗೆ ತಿಳಿಸಲಾಗಿದೆ.

## 6.7 ಸ್ವಪರೀಕ್ಷೆ ಪ್ರಶ್ನೆಗಳು

(1) ಕದಂಬರ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಯನ್ನು ವಿವರಿಸಿ

**ಟಿಪ್ಪಣಿ**

(1) ಕದಂಬ ರಾಜಕೀಯ ಹಿನ್ನಲೆ

(2) ಕದಂಬರ ಕಾಲದ ಜೈನಧರ್ಮ

## 6.8 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1) R.R. Diwakar : Karnataka through the Ages

2) P.B. Desai : History of Karnataka

3) G.M. Moraes : The Kadamba Kula

4) Dineshchandra Sarkar : The Successors of the Satavahanas

5) ಪ್ರೊ. G.R. ರಂಗಸ್ವಾಮಯ್ಯ : ಕರ್ನಾಟಕದ ಸಂಕ್ಷಿಪ್ತ ಚರಿತ್ರೆ

6) ಎನ್. ಲಕ್ಷ್ಮಿನಾರಾಯಣ ರಾವ್ ಮತ್ತು ಆರ್.ಎಸ್. ಪಂಚಮುಖಿ : ಕರ್ನಾಟಕದ ಅರಸು ಮನೆತನಗಳು

7) ಅ. ಸುಂದರ್ (ಸಂ) : ಕರ್ನಾಟಕ ಚರಿತ್ರೆ ಸಂ.1, ಕ.ವಿ. ಹಂಪಿ


**ಪ್ರೊ || ಮಾದೇಗೌಡ**

# ಟಿಪ್ಪಣಿಗಳು

# ಬ್ಲಾಕ್ -II

# ಘಟಕ - 7

# ತಮಿಳು ಸಂಗಮ್ ಯುಗ

ವಿಷಯ ಕ್ರಮ


**7.0** ಘಟಕದ ಉದ್ದೇಶ

**7.1** ಪೀಠಿಕೆ

**7.2** ಹಿನ್ನಲೆ

**7.3** ಸಂಗಮ್‌ಗಳ ಸ್ಥಾಪನೆ ಮತ್ತು ಸಾಹಿತ್ಯ ರಚನೆ

**7.4** ಸಂಗಮ್ ಯುಗದ ರಾಜಕೀಯ ಪರಿಸ್ಥಿತಿ

**7.4.1** ಚೋಳರು

**7.4.2** ಚೇರರು

**7.4.3** ಪಾಂಡ್ಯರು

**7.5** ಆಡಳಿತ ಪದ್ಧತಿ

**7.6** ಸಾಮಾಜಿಕ ಸ್ಥಿತಿ

**7.7** ಆರ್ಥಿಕ ಪರಿಸ್ಥಿತಿ

**7.8** ಧಾರ್ಮಿಕ ಪರಿಸ್ಥಿತಿ

**7.9** ಸಾರಾಂಶ

**7.10** ಸ್ವಪರೀಕ್ಷೆ ಪ್ರಶ್ನೆಗಳು

**7.11** ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 7.0 ಘಟಕದ ಉದ್ದೇಶ

ಆರಂಭದ ತಮಿಳ ಇತಿಹಾಸವನ್ನು 'ಸಂಗಮ್'ಸಾಹಿತ್ಯ ಆಧಾರಗಳ ಮೂಲಕ ಪರಿಚಯಿಸಿಕೊಳ್ಳುವುದೇ ಈ ಘಟಕದ ಉದ್ದೇಶ. ಈ ಪಾಠದಲ್ಲಿ ಅಡಕವಾಗಿರುವ ವಿಷಯಗಳನ್ನು ಅಧ್ಯಯನ ಮಾಡಿದ ಮೇಲೆ ಈ ಕೆಳಗಿನ ಅಂಶಗಳನ್ನು ತಿಳಿಯುವಿರಿ.

* 'ಸಂಗಮ್' ಯುಗದ ಅರ್ಥವಿವರಣೆ
* 'ಸಂಗಮ್'ಸಾಹಿತ್ಯ ಕೃತಿಗಳೆ ತಮಿಳರ ಆರಂಭದ ಇತಿಹಾಸ ರಚನೆಗೆ ಮೂಲಾಧಾರ
* ಉತ್ತರದ ಆರ್ಯ ಸಂಸ್ಕೃತಿ ಮತ್ತು ದಕ್ಷಿಣದ ದ್ರಾವಿಡ ಸಂಸ್ಕೃತಿಗಳ ಪರಸ್ಪರ ಪ್ರಭಾವ ಮತ್ತು ಮಿಲನಗಳನ್ನು ಅರಿವಿರಿ.
* ಪ್ರಾಚೀನ ತಮಿಳರ ತ್ರಿರಾಜ್ಯಗಳಾದ ಚೋಳ, ಚೇರ ಮತ್ತು ಪಾಂಡ್ಯ ಸಾಧನೆಯನ್ನು ಗ್ರಹಿಸುವಿರಿ.
* ಸಂಗಮ್ ಸಾಹಿತ್ಯ ಆಧಾರಗಳ ಮೇಲೆ ಸಂಗಮ್ ಯುಗದ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಪರಿಸ್ಥಿತಿಯನ್ನು ಮನದಟ್ಟು ಮಾಡಿಕೊಳ್ಳುವಿರಿ
* ಕ್ರಿಸ್ತಶಕ ಆರಂಭದ ಮೂನ್ನೂರು ವರ್ಷಗಳ ತಮಿಳರ ಇತಿಹಾಸ ರಚಿಸಲು ತಮಿಳು ಸಾಹಿತ್ಯವೇ ಮೂಲ ಆಧಾರ ಮತ್ತು ಆ ಯುಗಕ್ಕೆ ಸಂಗಮ್ ಯುಗವೆಂದು ಕರೆದಿರುವುದು ಸಮರ್ಪಕವಾಗಿದೆಯೆಂದು ಭಾವಿಸುವಿರಿ.

## 7.1 ಪೀಠಿಕೆ

ಕ್ರೈಸ್ತಪೂರ್ವ ಮತ್ತು ಕ್ರೈಸ್ತಾಶತರಂಭದ ಕಾಲದ ದಖ್ಖನ್ನಿನ ಇತಿಹಾಸ ಅರಿಯಲು ಪುರಾತತ್ವ ಶಾಸ್ತ್ರಾಧರಗಳು ಪ್ರಧಾನ ಪಾತ್ರ ನಿರ್ವಹಿಸಿದರೆ, ತಮಿಳುನಾಡಿನ ಕ್ರಿಸ್ತಶಕಾರಾಂಭ ಇತಿಹಾಸ ರಚಿಸಲು ತಮಿಳು ಸಾಹಿತ್ಯಾಧಾರಗಳು ಪ್ರಮುಖ ಪಾತ್ರವಹಿಸುತ್ತವೆ. ಪ್ರಾಚೀನ ತಮಿಳುನಾಡಿನ ಇತಿಹಾಸ ಅರಿಯಲು 'ಸಂಗಮ್'ಎಂಬ ತಮಿಳು ಸಾಹಿತ್ಯ ಪರಿಷತ್ ಅಥವಾ ಅಕಾಡೆಮಿಯಿಂದ ರಚಿಸಲ್ಪಟ್ಟ ಸಾಹಿತ್ಯಗಳೆ ಮೂಲಾಧಾರ. ಇವುಗಳ ನೆರವಿನಿಂದ ಪ್ರಾಚೀನ ತಮಿಳರ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಬಹುದು. ಆದುದರಿಂದ ಕ್ರಿ.ಶಕ ಆರಂಭದ ಮೂನ್ನೂರು ವರ್ಷಗಳ ಅವಧಿಯನ್ನು 'ಸಂಗಮ್' ಯುಗವೆಂದು ಕರೆಯಲಾಗಿದೆ.

ಈ ಯುಗದಲ್ಲಿ ಉತ್ತರ ಭಾರತದ ಆರ್ಯ ಸಂಸ್ಕೃತಿಯ ಪ್ರಭಾವ ಮತ್ತು ಪ್ರಾಚೀನ ತಮಿಳರ ಪ್ರತಿಕ್ರಿಯೆಯನ್ನು 'ಸಂಗಮ್'ಸಾಹಿತ್ಯ ಕೃತಿಗಳಿಂದ ತಿಳಿದುಕೊಳ್ಳಬಹುದಾಗಿದೆ. ವೈದಿಕ, ಬೌದ್ಧ ಮತ್ತು ಜೈನ ಮತಗಳ ಪ್ರಭಾವವು ಪ್ರಾಚೀನ ತಮಿಳು ನಾಡಿನ ಸಮಾಜದ ಮೇಲೆ ಎಷ್ಟರಮಟ್ಟಿಗೆ ಪರಿಣಾಮ ಉಂಟುಮಾಡಿದೆ ಎಂಬ ವಿಷಯವನ್ನು ಈ ಪಾಠದಲ್ಲಿ ತಿಳಿದುಕೊಳ್ಳಬಹುದು. ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳ ಮಿಲನಗಳನ್ನು ಈ 'ಸಂಗಮ್' ಯುಗದಲ್ಲಿ ಗುರುತಿಸಬಹುದಾಗಿದೆ.

## 7.2 ಹಿನ್ನಲೆ

ಈ ಘಟಕ ದಕ್ಷಿಣಭಾರತದ ಪ್ರಾಚೀನ ತಮಿಳುನಾಡಿನ ಇತಿಹಾಸಕ್ಕೆ ಸಂಬಂಧಿಸಿದೆ. ದಖನ್ನಿನಲ್ಲಿ ಶಾತವಾಹನ ಆಳ್ವಿಕೆಯ ಕೊನೆಗಾಲದಲ್ಲಿ ದಕ್ಷಿಣ ಭಾರತದ ತುತ್ತ ತುದಿಯಲ್ಲಿ ಚೋಳ, ಪಾಂಡ್ಯ ಮತ್ತು ಚೇರರು ರಾಜ್ಯವಾಳುತ್ತಿದ್ದರು. ಅವರು ಮಹಾಭಾರತದ ಕುರುಕ್ಷೇತ್ರ ಕದನದಲ್ಲಿ ಭಾಗವಹಿಸಿದರೆಂಬ ಪ್ರತೀತಿ ಇದೆ. ಕನ್ನಡನಾಡಿನ ದಕ್ಷಿಣ ಭಾಗವು ಚಾರಿತ್ರಿಕ ಕಾಲದಿಂದಲೂ ತಮಿಳುನಾಡು ಪ್ರದೇಶದೊಡನೆ ನಿಕಟ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಹೊಂದಿತ್ತು.

ಕನ್ನಡನಾಡಿನ ಈ ಭಾಗವನ್ನು ತಮಿಳರು ತಮಿಳುನಾಡು ಎಂದೇ ಕರೆದುಕೊಳ್ಳುತ್ತಿದ್ದರು. 'ತಮಿಳು' ಎಂಬ ಪದವನ್ನು ಕುರಿತು ಜಿಜ್ಞಾಸೆ ನಡೆದಿದೆ. ತಮಿಳು ಎಂಬ ಪದ ದ್ರಾವಿಡ ಎಂಬ ಪದದ ಪರ್ಯಾಯವಾಗಿ ಬಳಕೆಗೆ ಬಂದಿತೆಂಬ ಅಭಿಪ್ರಾಯವಿದೆ. 'ದ್ರಾವಿಡ' ಎಂಬ ಸಂಸ್ಕೃತ ಪದವೇ 'ದ್ರಾವಿಡ' ಹಾಗೂ 'ದ್ರಮಿಳ' ಎಂದು ರೂಪಗೊಂಡು ಕೊನೆಗೆ 'ತಮಿಳು' ಎಂಬ ರೂಪ ಪಡೆಯಿತ್ತೆಂದು ಹಲವರ ಅಭಿಪ್ರಾಯ. ತಮಿಳು ಎಂಬುವುದು ಮೂಲತಃ ತಮಿಳು ಭಾಷೆಯ ಪದವೆಂದು 'ತಮಿಳ್ಕಾಂ' ಎಂಬುದು. ತಮಿಳಿನ ಮಾತೃಭೂಮಿಯೆಂದು ಹಲವು ವಿದ್ವಾಂಸರು ನಂಬಿದ್ದಾರೆ. ತಮಿಳ್ಕಾಂ ಅಥವಾ ತಮಿಳುನಾಡಿಗೆ ಉತ್ತರದಲ್ಲಿ ತಿರುಪತಿ ಬೆಟ್ಟಗಳೂ, ದಕ್ಷಿಣಕ್ಕೆ ಕನ್ಯಾಕುಮಾರಿಯೂ, ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಸಮುದ್ರವೇ ಮೇರೆಗಳೆಂಬುದಾಗಿ ಪ್ರಾಚೀನ ತಮಿಳು ಗ್ರಂಥಗಳು ತಿಳಿಸುತ್ತವೆ. ಈ ಮೇರೆಗಳ ಮಧ್ಯಭಾಗದಲ್ಲಿ ಚೋಳರು, ಪಾಂಡ್ಯರು ಹಾಗೂ ಗೋಕರ್ಣದಿಂದ ಕನ್ಯಾಕುಮಾರಿಯವರೆಗಿನ ಪಶ್ಚಿಮ ತೀರದಲ್ಲಿ ಚೇರರು ಪ್ರಾಚೀನಕಾಲದಿಂದಲೂ ಆಳುತ್ತಿದ್ದ ವಿಷಯ ತಿಳಿದು ಬರುತ್ತದೆ. ಈ ಪ್ರದೇಶಗಳು ಉತ್ತರ ಭಾರತದಿಂದ ಆಗಮಿಸಿದ ಅಗಸ್ತ್ಯ ಋಷಿಗೆ ಸಂಬಂಧಿಸಿದ ಐತಿಹ್ಯಗಳು ಜನಜನಿತವಾಗಿವೆ. ಅಗಸ್ತ್ಯನೇ ತಮಿಳು ಭಾಷೆಯ ಜನಕ ಮತ್ತು ಅದರ ಮೊದಲನೆಯ ವ್ಯಾಕರಣಿಕನೆಂದು ನಂಬಲಾಗಿದೆ. ಅಗಸ್ತ್ಯ ಉಪಾಸನೆ ಜನಪ್ರಿಯವಾಗಿ ದಕ್ಷಿಣದಲ್ಲೆಲ್ಲಾ ವ್ಯಾಪಿಸಿದೆ. ಪೌರಾಣಿಕ ಐತಿಹ್ಯದ ಪ್ರಕಾರ ಅಗಸ್ತ್ಯನು ಪತ್ನಿ ಹಾಗೂ ನಾನಾ ಉಪ ಕಸುಬುಗಳಲ್ಲಿ ತೊಡಗಿದ್ದ ಅನುಯಾಯಿಗಳೊಡನೆ ಉತ್ತರದ ಭಾರತದ ಮಥುರ ಪಟ್ಟಣದಿಂದ ಬಂದು ತಮಿಳುನಾಡಿನ ಮಧುರೈಯ ಬಳಿಯಲ್ಲಿನ ಪೊಡಿಯಿಲ್ ಎಂಬಲ್ಲಿ ನೆಲಸಿದನು ಎಂದು ನಂಬಲಾಗಿದೆ. ಅಗಸ್ತ್ಯನಿಂದ ತಮಿಳಿನಲ್ಲಿ ರಚಿತವಾದ 'ಅಕತ್ತಿಯಂ' ಗ್ರಂಥವು ಹನ್ನೆರಡು ಸಾವಿರ ಸೂತ್ರಗಳನ್ನೊಳಗೊಂಡಿತ್ತೆಂದೂ ನಂಬಲಾಗಿದೆ. ಆದರೆ ಈ ಗ್ರಂಥ ಈಗ ದೊರೆಯುವುದಿಲ್ಲ. ಪ್ರಾಚೀನ ತಮಿಳು ಸಾಹಿತ್ಯ ಪರಂಪರೆಯಲ್ಲಿ ಉತ್ಪ್ರೇಕ್ಷೆಗಳು ಕಂಡು ಬಂದರು ಅಗಸ್ತ್ಯನ ಮೂಲಕ ಉತ್ತರ ಭಾರತದ ಸಂಸ್ಕೃತಿಯ ಪ್ರಸರವನ್ನು ತಳ್ಳಿ ಹಾಕಲು ಬರುವುದಿಲ್ಲ.

## 7.3 ಸಂಗಮ್‌ಗಳ ಸ್ಥಾಪನೆ ಮತ್ತು ಸಾಹಿತ್ಯ ರಚನೆ

ತಮಿಳು ಸಾಹಿತ್ಯದ ಚರಿತ್ರೆ ಸಂಗಮ್ ಯುಗದಿಂದ ಆರಂಭವಾಗುತ್ತದೆ. 'ಸಂಗಮ್'ಎಂಬುವುದು ಇಂದಿನ ಕಾಲದಲ್ಲಿ ವಿದ್ವಾಂಸರಿಂದ ಕೂಡಿದ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಯನ್ನು ಹೋಲುತ್ತಿದ್ದಿತು. ತಮಿಳುನಾಡಿನ ಸಾಹಿತ್ಯ ಪರಂಪರೆಯಲ್ಲಿ ಪ್ರಚಲಿತವಾಗಿರುವ ಅಭಿಪ್ರಾಯದ ಪ್ರಕಾರ ಅತಿ ಪ್ರಾಚೀನ ಕಾಲದಲ್ಲಿ ತಮಿಳುನಾಡಿನಲ್ಲಿ ಒಂದಾದ ಅನಂತರ ಮತ್ತೊಂದರಂತೆ ಮೂರು ಸಂಗಮ್‌ಗಳು ಸ್ಥಾಪಿತವಾಗಿ ಕಾರ್ಯ ನಿರ್ವಹಿಸಿವೆ. ಅವುಗಳು ಪಾಂಡ್ಯ ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟು ಉನ್ನತ ಸ್ಥಿತಿಯಲ್ಲಿದ್ದವು. ಅಲ್ಲದೆ ಮೂರು ಸಂಗಮ್‌ಗಳು ಅನೇಕಾನೇಕ ಪಾಂಡ್ಯ ರಾಜ್ಯರಿಂದಲೇ ಪೋಷಿತವಾದವು. ಪ್ರಥಮ ಸಂಗಮ್ ಹಳೇ ಮಧುರೈಯಲ್ಲಿ ಅಗಸ್ತ್ಯನಿಂದ ಸ್ಥಾಪಿತವಾಯಿತು. ಅಗಸ್ತ್ಯನೇ ಅದರ ಅಧ್ಯಕ್ಷನಾಗಿದ್ದನು. ಎಂಬತ್ತೊಂಬತ್ತು ಜನ ಪಾಂಡ್ಯರಾಜರು ಈ ಪ್ರಥಮ ಸಂಗಮ್ ಅನ್ನು ಪೋಷಿಸಿದರೆಂದೂ, ಅದು ನಾಲ್ಕು ಸಾವಿರದ ನಾನೂರು ವರ್ಷಗಳ ಕಾಲ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂದೂ ಹಾಗೂ ನಾಲ್ಕು ಸಾವಿರದ ನಾನೂರ ತೊಂಬತ್ತೊಂಬತ್ತು ಮಂದಿ ವಿದ್ವಾಂಸರು ಕೃತಿಗಳನ್ನು ರಚಿಸಿ ಈ ಸಂಗಮ್‌ನಿಂದ ಮನ್ನಣೆ ಪಡೆದಿದ್ದರೆಂದೂ ಪ್ರತೀತಿ ಇದೆ. ಈ ಪ್ರಥಮ ಪ್ರಾಚೀನ ಮಧುರೈ ಸಮುದ್ರದಲ್ಲಿ ಮುಳುಗಿಹೋಯಿತ್ತೆಂದೂ ಆ ಕಾಲದ ಗ್ರಂಥಗಳೆಲ್ಲ ನಾಶವಾದುವೆಂದು ಪರಂಪರಾನುಗತವಾಗಿ ಬಂದಿರುವ ಐತಿಹ್ಯ ತಿಳಿಸುತ್ತದೆ. ಮೊದಲನೇ ಮಧುರೈ ನಾಶವಾದ ಮೇಲೆ ಎರಡನೆಯ ಸಂಗಮ್‌ನ್ನು ಅಗಸ್ತ್ಯನು ಕಪಾಟಪುರಂ ಎಂಬಲ್ಲಿ ಸ್ಥಾಪಿಸಿದನೆಂದು ಇದು ಮೂರು ಸಾವಿರದ ಏಳನೂರು ವರ್ಷಗಳ ಕಾಲ ಉಳಿದಿದ್ದಿತೆಂದೂ ಹಾಗೂ ಐವತ್ತೊಂದು ಜನ ಪಾಂಡ್ಯ ರಾಜರಿಂದ ಪೋಷಿಸಿಲ್ಪಟ್ಟಿತ್ತೆಂದೂ ಹೇಳಲಾಗಿದೆ. ಈ ಎರಡನೆಯ ಸಂಗಮ್‌ನ ಗ್ರಂಥಾಲಯ ಎಂಟು ಸಾವಿರದ ನೂರನಲವತ್ತೊಂಭತ್ತು ಗ್ರಂಥಗಳನ್ನೊಳಗೊಂಡಿತ್ತೆಂದೂ, **''ತೊಲ್ಕಪ್ಪಿಯಂ''ಮಹಾಪುರಾಣಂ''ಭೂತಪುರಾಣ** ಮೊದಲಾದ

ಗ್ರಂಥಗಳು ಎರಡನೇ ಸಂಗಮ್ ಕಾಲದಲ್ಲಿ ರಚಿತವಾದ ಹಲವು ಕೃತಿಗಳೆಂದು ತಿಳಿದು ಬರುತ್ತದೆ. ಕಾಲ ಕ್ರಮೇಣದಲ್ಲಿ ಈ ಎರಡನೇ ಸಂಗಮ್‌ನ ಕಪಾಟಪುರವು ಸಮುದ್ರದಿಂದ ಆವರಿಸಲ್ಪಟ್ಟಿದ್ದರಿಂದ ಮೂರನೇ ಸಂಗಮ್‌ನ್ನು ಈಗಿನ ಮಧುರೈನಲ್ಲಿ ಸ್ಥಾಪಿಸಲಾಯಿತು. ಇದು ಒಂದು ಸಾವಿರದ ಎಂಟು ನೂರ ಐವತ್ತು ವರ್ಷಗಳ ಕಾಲ ಯಶಸ್ವಿಯಾಗಿ ಉಳಿದು ನಲವತ್ತೊಂಭತ್ತು ಪಾಂಡ್ಯ ರಾಜರಿಂದ ಪೋಷಿಸಲ್ಪಟ್ಟಿತು. ತಿರುವಳ್ಳವರ್ ಎಂಬ ದಾರ್ಶನಿಕ ಕವಿಯ ಅಮರ ಕೃತಿ 'ತಿರುಕ್ಕುರಳ್' ಗ್ರಂಥ ನಲವತ್ತೊಂಭತ್ತು ಜನ ಪಾಂಡ್ಯ ರಾಜರ ಹೆಸರುಗಳನ್ನೊಳಗೊಂಡಿದೆ. ತೃತೀಯ ಸಂಗಮ್ ಮತ್ತು ಅನಂತರ ರಚಿತವಾದ **'ಶಿಲಪ್ಪದಿಕರಂ', 'ಕುರುಳ್', 'ಪುನಾನೂರು', 'ಅಹನಾನೂರು', 'ಪದಿಟ್ರಪ್ಪತ್ತು', 'ಪತ್ತುಪ್ಪಾಟು', 'ಮಣಿಮೇಗಲೈ'**, ಜೀವಿಕ **'ಚಿಂತಾಮಣಿ'** ಮೊದಲಾದ ಕೃತಿಗಳು ತಮಿಳುನಾಡಿನ ಪ್ರಾಚೀನ ಸಂಸ್ಕೃತಿಯ ಹೆಚ್ಚು ವಿವರಗಳನ್ನು ನೀಡುತ್ತದೆ.

ಸಂಗಮ್ ಯುಗದ ಕಾಲನಿರ್ಣಯವು ವಿದ್ವಾಂಸರಿಗೆ ಬಹಳ ಕ್ಲಿಷ್ಟಕರವಾದ ವಿಷಯವಾಗಿದೆ. ಮೇಲೆ ತಿಳಿಸಿದ ಮೂರು ಸಂಗಮ್‌ಗಳಿಗೆ ಸಂಬಂಧಿಸಿದ ದೀರ್ಘ ಕಾಲಾವಧಿಯ ಹಾಗೂ ಅನೇಕ ಗ್ರಂಥಗಳಲ್ಲಿ ವರ್ಣಿಸಿರುವ ಲೌಕಿಕ ಮತ್ತು ಅಲೌಕಿಕ ವಿವರಣೆಗಳ ಐತಿಹಾಸಿಕ ಮೌಲ್ಯವನ್ನು ನಿರ್ಧರಿಸುವುದು ಬಹು ಪ್ರಯಾಸದ ಸಮಸ್ಯೆಯಾಗಿದೆ. ಒಟ್ಟಿನಲ್ಲಿ ಮೂರು ಬೇರೆ ಬೇರೆ ಸಂಗಂಗಳಿದ್ದವೊ ಅಥವಾ ಒಂದೇ ಸಂಗಮ್ ಮಾತ್ರ ಇದ್ದು ಉಳಿದ ಎರಡಕ್ಕೆ ಸಂಬಂಧಿಸಿದ ವಿವರಣೆಗಳು ಕೇವಲ ಉತ್ಪ್ರೇಕ್ಷೆಯೋ ಎಂಬ ಅಂಶವನ್ನು ನಿರ್ಧರಿಸುವುದೂ ಸಹ ಸಾಧ್ಯವಿಲ್ಲವಾಗಿದೆ. ಮಿಗಿಲಾಗಿ ಸಂಗವಮ್ ಯುಗಗಳಿಗೆ ಸಂಬಂಧಿಸಿದಂತೆ ಪೌರಣಿಕವಾದ ಕಾಲಮಾನವು ಜನಜನಿತವಾಗಿದೆ. ಆದುದರಿಂದ ಸಂಗಮ್ ಯುಗದ ಕಾಲಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ವಿದ್ವಾಂಸರು ಭಿನ್ನಾಭಿಪ್ರಾಯವನ್ನು ಸೂಚಿಸಿದ್ದಾರೆ. ಕ್ರಿ.ಪೂ. 500 ರಿಂದ ಕ್ರಿ. ಶ. 500 ರ ವರೆಗಿನ ಕಾಲ ಸಂಗವಮ್ ಯುಗದ ಗರಿಷ್ಠಾವಧಿಯಾಗಿದೆಯೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದರು. ಪ್ರೊ. ಕೆ.ಎ. ನೀಲಕಂಠಶಾಸ್ತ್ರಿಯವರು ಕ್ರಿ.ಶ. 100 ರಿಂದ 250 ರವರೆಗಿನ ಕಾಲವು ಸಂಗಮ್ ಯುಗದ ಅವಧಿಯಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ. ಪ್ರಾರಂಭದ ಮೂರು ಕ್ರೈಸ್ತ ಶತಕಗಳು ಸಂಗಮ್ ಯುಗದ ಕಾಲವಾಗಿದ್ದಿರಬೇಕೆಂಬ ಅಭಿಪ್ರಾಯವನ್ನು ಪ್ರೊ. ಆರ್. ಸತ್ಯನಾಥ ಅಯ್ಯರ್‌ರವರು ವ್ಯಕ್ತ ಪಡಿಸಿರುವರು. ಈ ಕೊನೆ ಅಭಿಪ್ರಾಯವನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ಕ್ರಿ.ಶ. ಎರಡನೇ ಶತಮಾನ ಪ್ರಾಚೀನ ತಮಿಳು ಸಾಹಿತ್ಯದ ಶ್ರೇಷ್ಠ ಯುಗವೆಂಬುವುದು ನಿರ್ವಿವಾದ ಸಂಗತಿಯಾಗಿದೆ. ಇದು ತಮಿಳು ಪದ್ಯ ರಚನೆಯ ಪುಷ್ಪಕಾಲವಾಗಿದ್ದಿತು. ಆ ಕಾಲದಲ್ಲಿ ಜ್ಞಾನಕ್ಕೆ ಸಂಬಂಧಿಸಿದ ಎಲ್ಲ ಶಾಖೆಗಳಲ್ಲೂ ತಮಿಳು ಕೃತಿಗಳು ರಚನೆಯಾದವು. ಹಲವಾರು ಕೃತಿಗಳು ನಾಶವಾಗಿದ್ದರೂ ಉಳಿದ ಬಂದಿರುವ ಸಂಗಮ್ ಕಾಲದ ಮತ್ತು ಅನಂತರ ರಚಿತವಾದ ಕೃತಿಗಳು ಸಂಗಮ್ ಯುಗದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಅರಿಯಲು ಸಹಕಾರಿಯಾಗಿವೆ.

## 7.4 ಸಂಗಮ್ ಯುಗದ ರಾಜಕೀಯ ಪರಿಸ್ಥಿತಿ

ಪ್ರಾಚೀನ ತಮಿಳು ನಾಡಿನ ರಾಜಕೀಯ ವ್ಯವಸ್ಥೆ ಮತ್ತು ಈ ಯುಗದಲ್ಲಿ ಅಸ್ತಿತ್ವದಲ್ಲಿದ್ದ ಮೂರು ಪ್ರಾಚೀನ ಐತಿಹಾಸಿಕ ರಾಜ್ಯಗಳನ್ನು ಕುರಿತು ವಿವರಿಸಲಾಗುವುದು.

### *7.4.1 ಚೋಳರು*

ಸಂಗಮ್ ಯುಗದ ಚೋಳ ರಾಜರಲ್ಲೆಲ್ಲ ಕರಿಕಾಲಚೋಳ ಅತ್ಯಂತ ಪ್ರಸಿದ್ಧನಾದವನು. ಸಂಗಮ್ ಸಾಹಿತ್ಯ ಗ್ರಂಥಗಳಲ್ಲಿ ಅವನಿಗೆ ಸಂಬಂಧಿಸಿದ ಅನೇಕ ವಿವರಗಳಿವೆ. ಅವನು ಚೇರ ಮತ್ತು ಪಾಂಡ್ಯರನ್ನು ಯುದ್ಧದಲ್ಲಿ ಸೋಲಿಸಿದನು. ಉರೈಯೂರು ಅವನ ರಾಜಧಾನಿಯಾಗಿದ್ದಿತು. ಕರಿಕಾಲ ಸಮುದ್ರಯಾನ ಮಾಡುತ್ತಿದ್ದಾಗ, ತನ್ನ ಅನುಕೂಲಕ್ಕೆ ತಕ್ಕಂತೆ ಸೇವೆ ಸಲ್ಲಿಸಲು ಒಮ್ಮೆ ವಾಯುವನ್ನು ಒತ್ತಾಯ ಪಡಿಸಿದ ಧೀರ ನಾಯಕನೆಂಬುದಾಗಿ ಚಿತ್ರಿಸಲಾಗಿದೆ. ಇದು ಪ್ರಾಯಶಃ

ಚೋಳರ ನೌಕಾಯಾನ ಸಾಹಸದ ಪ್ರಾರಂಭದ ದಿಶೆಯನ್ನು ಕುರಿತಾದ ಹೇಳಿಕೆ ಎಂಬುವುದು ನಿರ್ವಿವಾದ ಸಂಗತಿ. 'ಪುರನಾನೂರು'ಗ್ರಂಥವು ಕರಿಕಾಲ ಚೋಳನ ದಿಗ್ವಿಜಯಗಳನ್ನು ಚಿತ್ರಿಸುತ್ತದೆ. ತನ್ನ ಸುತ್ತಮುತ್ತಲಿನ ವೈರಿಗಳನ್ನೆಲ್ಲ ಸದೆಬಡಿದು ಅನಂತರ ಕರಿಕಾಲ ಸಿಂಹಳದ ದ್ವೀಪದ ಮೇಲೆ ಆಕ್ರಮಣ ಮಾಡಿ ಅಲ್ಲಿಂದ ಅಧಿಕ ಸಂಖ್ಯೆಯಲ್ಲಿ ಖೈದಿಗಳನ್ನು ತಂದು ಚೋಳ ನಾಡಿನಲ್ಲಿ ಸೇತುವೆಗಳನ್ನೂ ಮತ್ತು ನೀರಾವರಿ ಕಾಲುವೆಯನ್ನೂ ಕಟ್ಟಿಸಿದನೆಂದು ಪ್ರತೀತಿ ಇದೆ. ಕರಿಕಾಲ ಚೋಳ 'ಕಾವೇರಿ ಪಟ್ಟಣಂ' ಎಂಬಲ್ಲಿ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿದನೆಂದೂ ಅದು ವ್ಯಾಪಾರ ಕೇಂದ್ರವಾಗಿತ್ತೆಂದು ಪ್ರಚಲಿತವಾಗಿದೆ. ಕರಿಕಾಲ ಚೋಳ ನಿಜವಾದ ವ್ಯಕ್ತಿತ್ವ ಮತ್ತು ಸಾಧನೆಗಳ ಜೊತೆಗೆ ಅನೇಕ ಕಟ್ಟು ಕಥೆಗಳು ಬೆರೆತಿದ್ದಾಗ್ಯೂ ಅವನು ಐತಿಹಾಸಿಕ ವ್ಯಕ್ತಿ ಎಂಬುದರಲ್ಲಿ ಸಂದೇಹವಿಲ್ಲ. ಕರಿಕಾಲ ಚೋಳನ ಮರಣದ ನಂತರ ಆಳಿದ ಚೋಳರಲ್ಲಿ ಸೇಂಗಣ್ಣನ್ ಎಂಬುವವನು ಪ್ರಮುಖ ರಾಜ. ಸೇಂಗಣ್ಣನ್ ಚೋಳ ಪರಮ ಶೈವೋಪಾಸಕನಾಗಿದ್ದುದಲ್ಲದೆ ಸುಮಾರು ಎಪ್ಪತ್ತು ಶಿವಾಲಯಗಳನ್ನು ಕಟ್ಟಿಸಿದನೆಂದು ತಿಳಿದು ಬರುತ್ತದೆ. ಅನಂತರ ಸಿಂಹಾಸನಕ್ಕಾಗಿ ಅಂತಃಕಲಹಗಳು ಪ್ರಾರಂಭವಾದವು. ಆಂತರಿಕ ಸೆಣಸಾಟದಿಂದ ಚೋಳರ ಪ್ರಾಬಲ್ಯ ಕುಂದಿದುದಲ್ಲದೆ ಚೇರರ ಏಳಿಗೆಗೆ ಅವಕಾಶವಾಯಿತು.

### 7.4.2 *ಚೇರರು*

ಸಂಗಮ್ ಯುಗದ ಚೇರ ರಾಜರಲ್ಲೆಲ್ಲ ಸೆಂಗುತ್ತವನ್ ಚೇರ ಎಂಬುವನು ಅತ್ಯಂತ ಪ್ರಾಖ್ಯಾತನಾದವನು. ಈತನು ಕ್ರಿ.ಶ. 180 ರ ಸುಮಾರಿನಲ್ಲಿ ಆಳುತ್ತಿದ್ದನು. ತಿರುವಂಜಿ ಕಾಲಂ ಎಂಬುದು ಈತನ ರಾಜಧಾನಿಯಾಗಿತ್ತು. ಸೆಂಗುತ್ತವನ್ ಚೇರನು ಬಲಯುತವಾದ ಸೈನ್ಯ ಮತ್ತು ನೌಕಾದಳವನ್ನು ಹೊಂದಿದ್ದನು. 'ಪದಟ್ರಪತ್ತು' ಮತ್ತು 'ಶಿಲಪ್ಪದಿಕ್ಕಾರಂ' ಕೃತಿಗಳಲ್ಲಿ ಇವನ ವರ್ಣನೆ ಹೆಚ್ಚಾಗಿ ಕಂಡುಬರುತ್ತದೆ. ಸೆಂಗತ್ತವನ್ ಹಿಮಾಲಯದವರೆಗೂ ದಂಡಯಾತ್ರೆ ಮಾಡಿದನೆಂದು ವರ್ಣಿಸಲ್ಪಟ್ಟಿದ್ದಾನೆ. ಇದು ಅತಿಶಯೋಕ್ತಿಯೆಂಬುವುದರಲ್ಲಿ ಸಂದೇಹವಿಲ್ಲ. ಇವನು ಚೋಳರನ್ನೂ ಕೊಂದರು ಮತ್ತು ಇತರ ಸಣ್ಣಪುಟ್ಟ ರಾಜರನ್ನು ಸೋಲಿಸಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿದ್ದನು. ಇವನೇ **'ಶಿಲಪ್ಪದಿಕ್ಕಾರಂ'** ಕೃತಿಯ ನಾಯಕನೆಂಬುವುದರಲ್ಲಿ ಸಂದೇಹವಿಲ್ಲ. ಸೆಂಗುತ್ತವನ್ ಐವತ್ತು ವರ್ಷಗಳ ಕಾಲ ರಾಜ್ಯವಾಳಿದನು. ತನ್ನ ಧೀರ್ಘ ಆಳ್ವಿಕೆಯ ಕಾಲದಲ್ಲಿ ಧರ್ಮ ಮತ್ತು ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ನೀಡಿದನು. ಇವನು ಮುಖ್ಯವಾಗಿ ಶಿವನನ್ನೂ, ವಿಷ್ಣುವನ್ನೂ ಆರಾಧಿಸಿದಾಗ್ಯೂ ಜೈನ ಮತ್ತು ಬೌದ್ಧ ಮತಗಳಿಗೂ ಪ್ರೋತ್ಸಾಹ ಕೊಟ್ಟನು. ಸಂಗಮ್ ಕೃತಿಗಳಲ್ಲಿ ಎಂಟು ಜನ ಚೇರ ರಾಜರ ವರ್ಣನೆಗಳು ಕಾಣಬರುತ್ತವೆ. ಸೆಂಗುತ್ತವನ್ ಚೇರನ ತರುವಾಯ ಪಾಂಡ್ಯರು ಪ್ರಬಲರಾದರು.

### 7.4.3 *ಪಾಂಡ್ಯರು*

ಸಂಗಮ್ ಕಾವ್ಯಗಳಲ್ಲಿ ಇಪ್ಪತ್ತಕ್ಕೂ ಮೀರಿದ ಪಾಂಡ್ಯ ರಾಜರ ವರ್ಣನೆಗಳಿವೆ. ಇವರಲ್ಲಿ ಕ್ರಿ.ಶ. ಸುಮಾರು 210 ರ ಸುಮಾರಿನಲ್ಲಿ ಆಳುತ್ತಿದ್ದ ನೆಡುಂಜಳಿಯನ್ ಪಾಂಡ್ಯ ಅತ್ಯಂತ ಪ್ರಸಿದ್ಧನಾದವನು. ಮಧುರೈ ಪಾಂಡ್ಯರ ರಾಜಧಾನಿಯಾಗಿತ್ತು. ನೆಡುಂಜಳಿಯನ್ ಪಾಂಡ್ಯರು ಚೇರ, ಚೋಳ, ಪಡೆಗಳನ್ನು ಯುದ್ಧಗಳಲ್ಲಿ ಸೋಲಿಸಿ, ತಮಿಳು ನಾಡಿನಲ್ಲಿ ಪಾಂಡ್ಯರ ಪ್ರಭುತ್ವವನ್ನು ಸ್ಥಾಪಿಸಿದನು. ಇವನಿಂದ ಸ್ಥಾಪಿತವಾದ ಪಾಂಡ್ಯರ ಪ್ರಾಬಲ್ಯವು, ಪಲ್ಲವರು ಉನ್ನತಿಗೆ ಬರುವವರೆಗೂ ಮುಂದುವರೆಯಿತು. **'ಪುರನಾನೂರು'**, **'ಅಹನಾನೂರು'**, **'ನರ್ರಿನೈ'** ಮೊದಲಾದ ಗ್ರಂಥಗಳಲ್ಲಿ ನೆಡುಂಜಳಿಯನ್ ಪಾಂಡ್ಯನನ್ನು ರಣವೀರನೆಂದೂ, ವಿದ್ವಾಂಸರ ಆಶ್ರಯದಾತನೆಂದೂ ವರ್ಣಿಸಲಾಗಿದೆ. ಈತನು ವೈದಿಕ ಮತಾವಲಂಬಿಯಾಗಿದ್ದು ವೇದೋಕ್ತ ಯಜ್ಞಯಾಗಾದಿ ಕರ್ಮಗಳನ್ನು ನೆರವೇರಿಸಿದನು. ನೆಡುಂಜಳಿಯನ್ ಪಾಂಡ್ಯನೇ ಮೂರನೆಯ ಸಂಗಮ್‌ದ ಭವ್ಯತೆಗೆ ಬಹುಮಟ್ಟಿಗೆ ಕಾರಣನಾಗಿದ್ದನು. ಆತನ ತರುವಾಯ ಆಳಿದ ಪಾಂಡ್ಯ ಅರಸರಲ್ಲಿ ಭೂತ ಪಾಂಡ್ಯನ್ ಎಂಬುವನು ಪ್ರಸಿದ್ಧನಾದವನು. ಇವನು ವೀರಯೋಧನೂ, ಸ್ವತಃ ಕವಿಯೂ ಆಗಿದ್ದುದಲ್ಲದೆ ವಿದ್ವಾಂಸರಿಗೆ ವಿಶೇಷ ಪ್ರೋತ್ಸಾಹ ನೀಡಿದನು.

## 7.5 ಆಡಳಿತ ಪದ್ಧತಿ

ಸಂಗಮ್ ಸಾಹಿತ್ಯ ಗ್ರಂಥಗಳು ತಮಿಳು ನಾಡಿನ ರಾಜಕೀಯ ಸಂಸ್ಥೆಗಳ ಬಗೆಗೆ ವಿವರಣೆಗಳನ್ನು ಒದಗಿಸುತ್ತವೆ . ವಿವಾರಗ್ರಸ್ಥ ಉತ್ತರಾಧಿಕಾರ ಹಾಗೂ ಉತ್ತರಾಧಿಕಾರ ಹಾಗೂ ಸಿಂಹಾಸನಕ್ಕಾಗಿ ಅಂತರ್ಯುದ್ಧಗಳನ್ನು ಕಾಣಬಹುದಾದರೂ ವಂಶಪಾರಂಪರ್ಯವಾದ ರಾಜಪ್ರಭುತ್ವ ಆಚರಣೆಯಲ್ಲಿದ್ದಿತು. ರಾಜರು ಸಾಮಾನ್ಯವಾಗಿ ಯುದ್ಧಾಸಕ್ತರಾಗಿದ್ದುರಲ್ಲದೆ ಜ್ಞಾನಾಭಿವೃದ್ಧಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದರು. ಪಕ್ಷಪಾತವಿಲ್ಲದೆ ನ್ಯಾಯ ವಿತರಣೆ ಮಾಡುವುದು ಪ್ರಜೆಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದೂ, ಧರ್ಮ ಮತ್ತು ಸಾಹಿತ್ಯದ ಪುರೋಭಿವೃದ್ಧಿಗೆ ನೆರವಾಗುವುದೂ, ಪ್ರಜೆಗಳ ಅಭ್ಯುದಯವನ್ನೇ ಗುರಿಯಾಗಿಟ್ಟುಕೊಂಡು ಆಡಳಿತ ನಿರ್ವಹಿಸುವುದೂ ರಾಜನ ಮುಖ್ಯ ಕರ್ತವ್ಯಗಳಾಗಿದ್ದವು. ರಾಜನು ಆಡಳಿತ ನಿರ್ವಹಣಾ ವಿಷಯದಲ್ಲಿ ತನ್ನ ಆಪ್ತರಿಂದ ಸಲಹೆ ಪಡೆಯುತ್ತಿದ್ದನು. "ಕುರುಳ್" ಗ್ರಂಥವು ರಾಜನಿಗಿರಬೇಕಾದ ಆದರ್ಶ ಮತ್ತು ಕರ್ತವ್ಯ ಶ್ರದ್ಧೆಯನ್ನು ವಿವರಿಸುತ್ತದೆ. ರಾಜನು ಜನರ ಕುಂದುಕೊರತೆಗಳನ್ನು ವಿಚಾರಿಸಿ ಅವುಗಳನ್ನು ನಿವಾರಿಸಲು ಪ್ರತಿ ದಿನವು ಸಾಮಾನ್ಯ ಸಭೆ ನಡೆಸುತ್ತಿದ್ದನು. ಗ್ರಾಮ ಸಭೆಗಳು ಉತ್ಸಾಹದಿಂದ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದವು. ಈ ಸಭೆಗಳು ಎಲ್ಲಾ ವಿಷಯವನ್ನು ಕುರಿತು ವ್ಯವಹರಿಸುತ್ತಿದ್ದ ಜನತಾ ಸಭೆಗಳೆಂಬುದಾಗಿ ಕುರುಳ್ ಗ್ರಂಥ ತಿಳಿಸುತ್ತದೆ. ರಾಜ ಸುಸಜ್ಜಿತವಾದ ಸೈನ್ಯಪಡೆಯನ್ನು ಹೊಂದಿರುತ್ತಿದ್ದನು. ಸೈನ್ಯವು ಆನೆ, ಕುದುರೆ ಮತ್ತು ಕಾಲುಗಳುಗಳಿಂದ ಕೂಡಿದ ಬಲವಾಗಿದ್ದಿತು. ಕತ್ತಿ, ಬಿಲ್ಲು, ಬಾಣ, ಭರ್ಜಿಗಳು ಮುಖ್ಯವಾದ ಆಯುಧಗಳಾಗಿದ್ದವು. ಭೂಕಂದಾಯ ಮತ್ತು ವ್ಯಾಪಾರದ ಮೇಲಿನ ತೆರಿಗೆಗಳು ರಾಜ ಬೊಕ್ಕಸವನ್ನು ತುಂಬುವ ಸಾಧನಗಳಾಗಿದ್ದವು.

## 7.6 ಸಾಮಾಜಿಕ ಸ್ಥಿತಿ

ಪ್ರಾರಂಭದಲ್ಲಿ ಸಾಮಾಜಿಕ ವ್ಯವಸ್ಥೆಗೆ ಕಸುಬು ಪ್ರಧಾನವಾಗಿತ್ತು. ವ್ಯವಸಾಯಗಾರರು, ವರ್ತಕರು, ನೇಯ್ಗೆಯವರು, ಬೇಟೆಗಾರರು, ಬೆಸ್ತರು ಮೊದಲಾದ ಅನೇಕ ಪಂಗಡಗಳಿದ್ದವು. ತಮಿಳು ನಾಡಿನಲ್ಲಿ ಆರ್ಯ ಸಾಮಾಜಿಕ ವ್ಯವಸ್ಥೆಯಂತಹ ನಾಲ್ಕು ವರ್ಣಗಳೂ, ಚತುರಾಶ್ರಮಗಳೂ ಅಪರಚಿತವಾಗಿದ್ದವು. ಆರ್ಯ ಸಂಸ್ಕೃತಿಯ ಸಂಪರ್ಕದಿಂದ ಬ್ರಾಹ್ಮಣವರ್ಗ ತಮಿಳುನಾಡಿನಲ್ಲಿ ಕ್ರಮೇಣ ತಮಿಳುನಾಡಿನ ಸಮಾಜದಲ್ಲಿ ಬೇರೂರಿತು. ಆರ್ಯರ ಸಾಮಾಜಿಕ ಪದ್ಧತಿಗಳು ಪ್ರಭಾವ ಬೀರಿದ್ದರೂ ಮೂಲ ಪದ್ಧತಿಗಳು ಬಹುಸಂಖ್ಯಾತರಲ್ಲಿ ಉಳಿದುಕೊಂಡು ಬಂದವು. ಕೆಳವರ್ಗದ ಜನರು ತೊಡಗಿದ್ದ ಉದ್ಯೋಗದ ಆಧಾರದ ಮೇಲೆ ಅನೇಕ ಉಪಜಾತಿಗಳು ಹುಟ್ಟಿಕೊಂಡವು. ಒಂದೇ ಜಾತಿಯವರು ತಮ್ಮ ತಮ್ಮ ಜಾತಿಯಲ್ಲೆ ಮದುವೆ ಮಾಡಿಕೊಳ್ಳುವ ವಾಡಿಕೆ ಬೇರೂರಿತು. ಸಾಮಾನ್ಯವಾಗಿ ಗಂಡಂಸರು ಎರಡು ವಸ್ತ್ರಗಳನ್ನು ಧರಿಸುತ್ತಿದ್ದರು. ಒಂದನ್ನು ನಡುವಿನ ಸುತ್ತಲೂ ಸುತ್ತಿಕೊಂಡು ಮತ್ತೊಂದನ್ನು ಭುಜಗಳ ಮೇಲೆ ಹಾಕಿಕೊಳ್ಳುತ್ತಿದ್ದರು. ರಾಜರು ಮತ್ತು ಶ್ರೀಮಂತ ವರ್ಗದ ಜನರು ಬೆಲೆಬಾಳುವ ಮತ್ತು ಶೃಂಗಾರಮಯವಾದ ಉಡಿಗೆ ತೊಡಿಗೆಗಳನ್ನು ಧರಿಸುತ್ತಿದ್ದರು. ಬಳೆಗಳು, ಕಂಠಭರಣಗಳು, ತೋಳ ಬಂದಿಗಳು, ಸೊಂಟದ ಪಟ್ಟಿಗಳು ಮತ್ತು ಕಾಲ್ಮುರಿಗಳು ಸ್ತ್ರೀಯರ ಸಂಪ್ರದಾಯಿಕ ಆಭರಣಗಳಾಗಿದ್ದವು. ಜನರು ಸಸ್ಯಾಹಾರ ಮತ್ತು ಮಾಂಸಾಹಾರವನ್ನು ಉಪಯೋಗಿಸುತ್ತಿದ್ದರು. ಜೈನ, ಬೌದ್ಧ ಮತಗಳ ಪ್ರಭಾವದಿಂದ ಕ್ರಮೇಣ ಮಾಂಸಾಹಾರವನ್ನು ನಿಷೇಧಿಸುವ ಪ್ರಯತ್ನಗಳು ನಡೆದವು. ಅಕ್ಕಿ, ಹಾಲು, ತುಪ್ಪ, ಕಾಯಿಪಲ್ಯಗಳು, ಸೊಪ್ಪು ಮತ್ತು ಗೆಡ್ಡೆ ಗೆಣಸುಗಳನ್ನು ಜನರು ತಿನ್ನುತ್ತಿದ್ದರು.

ಜನಸಾಮಾನ್ಯರು ಮಣ್ಣಿನ ಗೋಡೆಗಳಿಂದ ಕಟ್ಟಿದ ಮನೆಗಳಲ್ಲಿ ವಾಸಿಸುತ್ತಿದ್ದರು. ಮೇಲ್ಛಾವಣಿಗಳಿಗೆ ಗರಿ ಮತ್ತು ಹುಲ್ಲನ್ನು ಹೊದಿಸುತ್ತಿದ್ದರು. ರಾಜರ ಅರಮನೆಗಳು ಭವ್ಯ ಭವನಗಳಾಗಿದ್ದವು. ಅನೇಕ ದೊಡ್ಡ ದೊಡ್ಡ ಪಟ್ಟಣಗಳಿದ್ದಾಗ್ಯೂ ಬಹುತೇಕ ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದರು. ಪಟ್ಟಣಗಳಲ್ಲಿ ವೇಶ್ಯೆಯರೂ ಮತ್ತು ರಾಜನರ್ತಕಿಯರೂ ಇರುತ್ತಿದ್ದರು. ಜನರು

ಅನೇಕ ಬಗೆಯ ಮನರಂಜನೆ ಕಾರ್ಯ ಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ತಮಿಳು ಸ್ತ್ರೀಯರು ಸಾಮಾಜಿಕ ಸ್ವಾತಂತ್ರ್ಯ ಹೊಂದಿದ್ದರು. ನೃತ್ಯ ಮತ್ತು ಸಂಗೀತ ಕಲೆ ಅತ್ಯಂತ ಜನಪ್ರಿಯವಾಗಿದ್ದವು. ಸತಿ ಪದ್ಧತಿ ಆಚರಣೆಯಲ್ಲಿದ್ದಿತು. ಶವಗಳನ್ನು ಹೂಳುವ ಮತ್ತು ಸುಡುವ ಪದ್ಧತಿಗಳು ಆಚರಣೆಯಲ್ಲಿದ್ದವು.

## 7.7 ಆರ್ಥಿಕ ಪರಿಸ್ಥಿತಿ

ಈ ಯುಗದಲ್ಲಿ ವ್ಯವಸಾಯ ಪ್ರಧಾನವಾದ ಕಸುಬಾಗಿದ್ದಿತು. ಚೇರ ನಾಡು ಎಮ್ಮೆ, ಹಲಸಿನ ಹಣ್ಣು, ಮೆಣಸು, ಜೀರಿಗೆ, ಅರಿಸಿನ ಮತ್ತು ಹುಣಸೆಹಣ್ಣುಗಳಿಗೆ ಪ್ರಸಿದ್ಧಿಯಾಗಿದ್ದಿತು. ಚೋಳನಾಡಿನ ಕಾವೇರಿ ಬಯಲಿನಲ್ಲಿ ವಿಶೇಷವಾಗಿ ಬತ್ತವನ್ನು ಬೆಳೆಯುತ್ತಿದ್ದರು. ರಾಗಿ, ಬತ್ತ, ಕಬ್ಬು ಬೆಳೆಯುವುದು, ಬೆಲ್ಲ ತಯಾರಿಸುವುದು, ಧಾನ್ಯಗಳ ಕೊಯ್ಯುವುದು ಹಾಗೂ ಒಣಗಿಸುವುದು ಮೊದಲಾದ ವಿಷಯಗಳನ್ನು ಸಂಗಮ್ ಕಾವ್ಯಗಳಲ್ಲಿ ವೈವಿಧ್ಯಮಯವಾಗಿಯೂ, ನೈಜವಾಗಿಯೂ ಚಿತ್ರಿಸಲಾಗಿದೆ. ದನಕರುಗಳನ್ನು ಸಾಕುವುದು, ನೂಲುವುದು, ನೇಯುವುದು, ಬೇಟೆ, ಮಡಕೆಗಳನ್ನು ತಯಾರಿಸುವುದು, ಮೀನು ಹಿಡಿಯುವುದು ಮೊದಲಾದ ಉಪಕರಣಗಳಲ್ಲಿ ಜನರು ತೊಡಗಿದ್ದರು. ಸಮುದ್ರ ತೀರ ಪ್ರದೇಶದಲ್ಲಿ ಜನರು ಉಪ್ಪನ್ನು ತಯಾರಿಸುತ್ತಿದ್ದರು. ಬಂಗಾರ ಸಮಾಜದಲ್ಲಿ ಸಾಕಷ್ಟು ಉಪಯೋಗದಲ್ಲಿತ್ತು.

ಒಳನಾಡಿನ ಮತ್ತು ಸಾಗರೋತ್ತರ ವ್ಯಾಪಾರ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ತಮಿಳು ಪದ್ಯಗಳು ಹಾಗೂ ಪುರಾತತ್ವ ಶೋಧನೆಗಳು ವಿದೇಶಗಳೊಡನಿದ್ದ ವ್ಯಾಪಾರ ಸಂಪರ್ಕವನ್ನರಿಯಲು ಸಹಕಾರಿಯಾಗಿವೆ. 'ಪೆರಿಪ್ಲಸ್' ಕೃತಿಯ ಕರ್ತೃ ದಕ್ಷಿಣ ಭಾರತದ ಮತ್ತು ರೋಮನ್ ಸಾಮ್ರಾಜ್ಯದ ಮಧ್ಯೆ ಏರ್ಪಟ್ಟಿದ್ದ ವಾಣಿಜ್ಯ ಸಂಬಂಧವನ್ನು ವಿಶ್ಲೇಷಿಸಿರುವರು. ವ್ಯಾಪಕ ಸಂಖ್ಯೆಯಲ್ಲಿ ಮಧುರೆಯ ಸುತ್ತಮುತ್ತ ದೊರೆತಿರುವ ರೋಮನ್ ನಾಣ್ಯಗಳೂ ಕೂಡ ತಮಿಳುನಾಡು ಮತ್ತು ರೋಮನ್ ಸಾಮ್ರಾಜ್ಯದೊಡನಿದ್ದ ವ್ಯಾಪಾರ ಸಂಪರ್ಕವನ್ನು ಊಹಿಸಿಕೊಳ್ಳಲು ಸಹಕಾರಿಯಾಗಿವೆ. ಯವನರ ಗಾಜಿನ ವಸ್ತುಗಳು, ಪುಷ್ಪಕುಂಭ ಮತ್ತು ದ್ರಾಕ್ಷಾರಸದ ಪ್ರಸ್ತಾಪ ಸಂಗಮ್ ಸಾಹಿತ್ಯದಲ್ಲಿ ಅಲ್ಲಲ್ಲಿ ಕಂಡು ಬರುತ್ತದೆ. ಪಾಂಡ್ಯ ನಾಡಿನ ಸಲಿಯೂರ್ ಮತ್ತು ಚೇರದ ಬಂದಾರ್‌ಗಳು ಆಕಾಲದಲ್ಲಿ ಮುಖ್ಯವಾದ ರೇವು ಪಟ್ಟಣಗಳಾಗಿದ್ದವು.

ಸಾಂಬಾರ ಪದಾರ್ಥಗಳು, ವ್ಯವಸಾಯೋತ್ಪನ್ನಗಳು, ತೇಗದ ಮರ, ಗಂಧದ ಮರ, ವಜ್ರ, ಪಚ್ಚೆ ಮತ್ತು ಹತ್ತಿ ಬಟ್ಟೆಯನ್ನು ರೋಮ್ ಮತ್ತು ಇತರ ದೇಶಗಳಿಗೆ ರಫ್ತು ಮಾಡುತ್ತಿದ್ದರು. ನವಿಲು, ಮಂಗಗಳು, ಚಿರತೆ ಮೊದಲಾದ ಪ್ರಾಣಿಗಳನ್ನು ಹೊರದೇಶಗಳಿಗೆ ಕಳುಹಿಸಿ ಕೊಡಲಾಗುತ್ತಿತ್ತು. ನಾನಾ ವಿಧವಾದ ಹವಳ, ಸೀಸ, ಗಾಜಿನ ಸಾಮಗ್ರಿಗಳನ್ನು ಹೊರದೇಶದಿಂದ ಆಮದಾಗುತ್ತಿದ್ದವು.

## 7.8 ಧಾರ್ಮಿಕ ಪರಿಸ್ಥಿತಿ

ಸಂಗಮ್ ಯುಗದ ಪ್ರಾರಂಭದಲ್ಲಿ ಧಾರ್ಮಿಕ ಆಚರಣೆಗಳೂ, ಪೂಜಾವಿಧಾನಗಳು ವೈಧಿಕ ಪದ್ಧತಿಗಿಂತ ಭಿನ್ನವಾಗಿದ್ದವು. ಮಾತೃದೇವತೆ ಮತ್ತು ಲಿಂಗಾರಾಧನೆ ಸ್ಥೂಲವಾಗಿ ಆಚರಣೆಯಲ್ಲಿದ್ದಿತು. ಶಿವ, ಮುರುಗ, ಮೊದಲಾದ ಅನೇಕ ದೇವತೆಗಳನ್ನು ಜನರು ಆರಾಧಿಸುತ್ತಿದ್ದರು. ವೈಧಿಕ ಧರ್ಮ ಕ್ರಮೇಣ ದಕ್ಷಿಣ ಭಾರತದಲ್ಲಿ ಪ್ರಚಾರವಾಯಿತು. ಆರ್ಯ ದ್ರಾವಿಡ ಮತ ಸಂಪ್ರದಾಯಗಳು ಮಿಲನಗೊಂಡು ಚತುರ್ವರ್ಣಗಳ ವ್ಯವಸ್ಥೆ ವೈದಿಕ ಮತ ಅನುಯಾಯಿಗಳಲ್ಲಿ ಆಚರಣೆಗೆ ಬಂದಿತು. ಬ್ರಾಹ್ಮಣರು ಜ್ಞಾನಾರ್ಜನೆಯಲ್ಲೂ ಧಾರ್ಮಿಕ ಕಾರ್ಯಗಳಲ್ಲೂ ನಿರತರಾಗಿದ್ದು, ಸಮಾಜದಲ್ಲಿ ಉನ್ನತಸ್ಥಾನ ಹೊಂದಿದ್ದರು. ಸಾಧು, ಸನ್ಯಾಸಿಗಳನ್ನು ಸನ್ಮಾನ್ಯರೆಂದು ಹೆಸರಿಸಲಾಗುತ್ತಿತ್ತು. ದೇವಾಲಯ ನಿರ್ಮಾಣ ಆಚರಣೆಗೆ ಬಂದಿತು. ಮುರುಗನ್ ಮೂರ್ತಿಯ ಪೂಜೆ ಮತ್ತು ಆರಾಧನೆಯೊಂದಿಗೆ ಆ ದೇವತೆಯ ಸಾಧನೆಗಳು ಕಥೆಗಳ ರೂಪದಲ್ಲಿ

ತಮಿಳುನಾಡಿನಲ್ಲಿ ಸಂಗಮ್ ಕಾಲದಲ್ಲಿ ಪ್ರಚಾರಕ್ಕೆ ಬಂದಿತು. ಕ್ರಮೇಣ ಮುರುಗನ್ ಕಾರ್ತಿಕೇಯ, ಶಿವ- ನೀಲಕಂಠ, ಬಲದೇವ, ಕೃಷ್ಣ-ವಿಷ್ಣು ಮತ್ತು ಸ್ಕಂದ-ಕಾರ್ತಿಕೇಯ ಮೂರ್ತಿಗಳ ಆರಾಧನೆ ಪ್ರಚಾರಕ್ಕೆ ಬಂದಿತು. ಶಿವ-ದುರ್ಗಿ ಬ್ರಹ್ಮ-ಸರಸ್ವತಿ, ವಿಷ್ಣು-ಲಕ್ಷ್ಮಿ ದೇವತೆಗಳ ಆಚರಣೆ ಆರಾಧನೆ ಆಚರಣೆಗೆ ಬಂದಿತು. 'ಮಣಿಮೇಖಲೈ'ಗ್ರಂಥದಲ್ಲಿ ಸರಸ್ವತಿಯ ದೇವಾಲಯವೊಂದನ್ನು ವರ್ಣಿಸಲಾಗಿದೆ. ಸಾಮಾನ್ಯವಾಗಿ ಸಂಗೀತ ಮತ್ತು ನೃತ್ಯಗಳನ್ನು ಧಾರ್ಮಿಕ ಸಮಾರಂಭಗಳ ಜೊತೆಗೆ ಅಳವಡಿಸಿಕೊಳ್ಳಲಾಗಿತ್ತು.

ಬೌದ್ಧ, ಜೈನ ಮತಗಳು ತಮಿಳು ನಾಡಿನಲ್ಲಿ ಈ ಕಾಲದಲ್ಲಿ ಪ್ರಚಾರವಾಗಿದ್ದವು. ಅಶೋಕನ ಆಳ್ವಿಕೆ ಕಾಲದಲ್ಲಿ ಬೌದ್ಧಮತ ಪ್ರಸಾರವಾಯಿತು. ಅನಂತರ ಬೌದ್ಧ ಸಂಘಗಳು ಮತ ಪ್ರಚಾರಕಾರ್ಯವನ್ನು ಮುಂದುವರಿಸಿದವು. ಕ್ರೈಸ್ತಶಕಾರಂಭದಲ್ಲಿ ನಾಗಪಟ್ಟನಂ ಮತ್ತು ಕಾಂಜೀವರಂಗಳು ತಮಿಳುನಾಡಿನಲ್ಲಿ ಬೌದ್ಧಮತದ ಬೃಹತ್ ಕೇಂದ್ರಗಳಾಗಿದ್ದವು. **'ಸೆಲಪ್ಪದಿಕಾರಂ'** ಮತ್ತು 'ಮಣಿಮೇಖಲೈ' ಗ್ರಂಥಗಳಲ್ಲಿ ಬೌದ್ಧಮತದ ವರ್ಣನೆಗಳಿವೆ. ಸೇಂಗುವತ್ತವನ್ ಚೇರನ ಸಹೋದರನಾದ ಇಲ್ಲಾಂಗೋ ಅಡಿಗಳ್ ಬೌದ್ಧ ಸನ್ಯಾಸಿಯಾದ. ಈತ ಸಿತಾಲೈ ಸತ್ತಾನನ್ ಎಂಬ ಬೌದ್ಧ ಭಿಕ್ಷುವಿನ ಶಿಷ್ಯನಾಗಿದ್ದ. ಜೈನಮತವೂ ತಮಿಳುನಾಡಿನಲ್ಲಿ ವ್ಯಾಪಿಸಿತು. ಕ್ರಿ.ಶ. ಎರಡನೇ ಶತಮಾನದಲ್ಲಿ ಮಧುರೆ ನಗರ ಜೈನ ಮತೀಯರ ಪ್ರಮುಖ ಕೇಂದ್ರವಾಗಿತ್ತು. ಕೆಲವು ಪಾಂಡ್ಯ ರಾಜರು ಜೈನ ಮತಾವಲಂಬಿಗಳಾಗಿದ್ದರು. 'ಜೀವಿಕ ಚಿಂತಾಮಣಿ' ಎಂಬ ಕೃತಿ ಒಬ್ಬ ಜೈನ ಕವಿ ತಿರುತಕ್ಕತ್ತವರ್ ಎಂಬುವನಿಂದ ರಚಿತವಾಯಿತು. ಸಂಗಮ್ ಯುಗದಲ್ಲಿ ತಮಿಳುನಾಡಿನಲ್ಲಿ ಧಾರ್ಮಿಕ ಗೊಂದಲವಿರಲಿಲ್ಲ. ವೈದಿಕ, ಬೌದ್ಧ ಮತ್ತು ಜೈನ ಧರ್ಮಿಯ ಅನುಯಾಯಿಗಳಿದ್ದರು.

## 7.9 ಸಾರಾಂಶ

ಈ ಘಟಕದಲ್ಲಿ ಆರಂಭದ ತಮಿಳು ಇತಿಹಾಸವನ್ನು ಅರಿಯಲು 'ಸಂಗಮ್'ಪರಿಷತ್ತುಗಳಲ್ಲಿ ರಚಿಸಿದ ಸಾಹಿತ್ಯ ಕೃತಿಗಳ ಮಹತ್ವವನ್ನು ವಿವರಿಸಿ ಅವುಗಳ ಪಾತ್ರವನ್ನು ನಿಮಗೆ ಮನದಟ್ಟು ಮಾಡಿಕೊಟಲು ಯತ್ನಿಸಿದ್ದೇವೆ.

ಉತ್ತರ ಮತ್ತು ದಕ್ಷಿಣದ ಸಂಸ್ಕೃತಿಗಳ ಪರಸ್ಪರ ಪ್ರಭಾವ ಮತ್ತು ಅನೇಕ ವಿಷಯಗಳಲ್ಲಿ ಮಿಲನಗೊಂಡಿರುವುದನ್ನು ನೀವು ಗಮನಿಸಿದ್ದೀರಿ.

ಪ್ರಾಚೀನ ತಮಿಳು ತ್ರಿರಾಜ್ಯಗಳ ರಾಜಕೀಯ ಹಾಗೂ ಸಾಂಸ್ಕೃತಿಕ ಸಾಧನೆಗಳನ್ನು ನಿಮಗೆ ತಿಳಿಸಿಕೊಡಲಾಗಿದೆ. ಚೋಳ, ಪಾಂಡ್ಯ ಮತ್ತು ಚೇರ ಅರಸರು ಈ ಯುಗದ ಧರ್ಮಗಳ ಮತ್ತು ಸಂಸ್ಕೃತಿಯ ಪೋಷಕರಾಗಿ ಅವರ ಪಾತ್ರವನ್ನು ನಿಮ್ಮ ಗಮನಕ್ಕೆ ತರಲಾಗಿದೆ.

ಈ ಯುಗದಲ್ಲಿ ಸಾಮಾಜಿಕ ಸಂರಚನೆಯಲ್ಲಿ ಆರ್ಥಿಕ ಪರಿಸ್ಥಿತಿಯಲ್ಲಿ ಹಾಗೆ ಧಾರ್ಮಿಕ ಜೀವದಲ್ಲಿ ಉಂಟಾದ ಮಾರ್ಪಾಡುಗಳನ್ನು ತಿಳಿಸಲು ಈ ಪಾಠದಲ್ಲಿ ಯತ್ನಿಸಲಾಗಿದೆ.

## 7.10 ಸ್ವಪರೀಕ್ಷೆ ಪ್ರಶ್ನೆಗಳು

1. ಆರಂಭದ ತಮಿಳುನಾಡಿನ ಇತಿಹಾಸದಲ್ಲಿ ಸಂಗಮ್ ಯುಗದ ಮಹತ್ವವನ್ನು ವಿವರಿಸಿ
2. ಪ್ರಾಚೀನ ತಮಿಳ ರಾಜಕೀಯ ಮತ್ತು ಸಾಂಸ್ಕೃತಿಕ ವಿಷಯವನ್ನು ತಿಳಿಯಲು 'ಸಂಗಮ್' ಸಾಹಿತ್ಯದ ಮೌಲ್ಯಗಳನ್ನು ಚರ್ಚಿಸಿ

**3.** ಟಿಪ್ಪಣಿ

(1) ಎರಡನೆ ಮತ್ತು ಮೂರನೆ ಸಂಗಮ್ ಕುರಿತು ಬರೆಯಿರಿ

(2) ಸಂಗಮ್ ಸಾಹಿತ್ಯ ಕೃತಿಗಳನ್ನು ಪಟ್ಟಿ ಮಾಡಿರಿ

(3) ಸಂಗಮ್ ಯುಗದಲ್ಲಿ ಧಾರ್ಮಿಕ ಜೀವನ

(4) ಸಂಗಮ್ ಯುಗದ ಸಾಮಾಜಿಕ ಜೀವನ

## 7.11 ಹೆಚ್ಚಿನ ಅಧ್ಯಯನಕ್ಕಾಗಿ ಹೆಚ್ಚಿನ ಗ್ರಂಥಗಳು


(1) K.A. Nilakanta Sastri : **History and Culture of Tamils**

(2) .N. Subramanian : **The Sangam Polity**

(3) ಜಿ.ಆರ್. ರಂಗಸ್ವಾಮಯ್ಯ : ಪ್ರಾಚೀನ ಭಾರತ

(4) K.A. Nilakanta Sastri : **A History of South Chola**

(5) R. Satyanatha Iyer : **History of India, Vol I**

(6) Rajan Gurukkal : The beginings of the history period : The Tamil South in Recent perspectives of early Indian History by Romila Thapar (Ed)

(7) M.G.S. Narayanan : Re-Interpretation in South Indian History.

(8) Karashima .N. : South Indian History and Society.


**ಪ್ರೊ || ಮಾದೇಗೌಡ**

# ಟಿಪ್ಪಣಿಗಳು


# ಟಿಪ್ಪಣಿಗಳು

# ಟಿಪ್ಪಣಿಗಳು

ಆದೇಶ ಸಂಖ್ಯೆ : ಕರಾಮುವಿ/ಅಸಾವಿ/2-1614/2012-2013 ದಿನಾಂಕ : ಜೂನ್ 2012
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 170 GSM ಆರ್ಟ್‌ಕಾರ್ಡ್
ಮುದ್ರಕರು : ಗೀತಾಂಜಲಿ ಗ್ರಾಫಿಕ್ಸ್, ಬೆಂಗಳೂರು. ಪ್ರತಿಗಳು : 4500

# Karnataka State Open University

Manasagangotri Mysore - 570 006




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary


● **HEAD QUARTERS**

★ **Total Study Centres : 111**

♣ **Regional Centres : 10**

❄ **B.Ed Study Centres : 10**

✦ **M.Ed Study Centres : 08**


STUDENT
INSTRUCTIONAL SYSTEM